Mr. SPEAKER.—Title and Preamble. The question is.—

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri K. T. BHASHYAM.—Sir, I beg to move.—

"That the Mysore Electricity (Taxation on Consumption) Bill, 1950, be passed."

Mr. SPEAKER.—The question is—

"That the Mysore Electricity (Taxation on Cousumption) Bill, 1950, be passed."

The motion was adopted.

The Mysore Alienated Villages (Protection of Tenants and Miscellaneous) Provisions Bill, 1950.

Motion to consider.

Sri H. SIDDAIYA. (Minister for Revenue and Excise).—Sir, I beg to move:

"That the Mysore Alienated Villages (Protection of Tenants and Miscellaneous Provisions) Bill, 1950, be taken into consideration."

Before moving it, I wish to say a few words on the Bill. The House already knows that the Government have appointed a Committee to go into the question of revision of land revenue system in the State under the Chairmanship of *Rajamantrapravina* H. B. Gundappa Gowda in August 1948. Soon after the Committee was appointed and the terms of reference.....

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಸ್ವಾಮಿ, ಈ ಮಸೂದೆ ಬಹು ಮುಖ್ಯವಾದುದು. ಇದರ ವಿಚಾರವನ್ನು ಮಂತ್ರಿಗಳು ಕನ್ನಡದಲ್ಲೇ ಹೇಳಿದರೆ ಉತ್ತಮ, ಎಲ್ಲರಿಗೂ ಚೆನ್ನಾಗಿ ತಿಳಿಯಲು ಅನುಕೂಲವಾಗುತ್ತದೆ.

ಶ್ರೀ ಎಚ್. ಸಿದ್ದಯ್ಯನವರು:—ಆಗಬಹುದು.

ನಮ್ಮ ಸಂಸ್ಥಾನದಲ್ಲಿ ಸುಮಾರು 2,100 ಇನಾಮ್ ಗ್ರಾಮಗಳಿವೆ. ಇವುಗಳ ಒಟ್ಟು ವಿಸ್ತೀರ್ಣ 13,80,000 ಎಕರೆಯಷ್ಟಾಗುತ್ತದೆ. ಒಟ್ಟು ಸಂಸ್ಥಾನದಲ್ಲರುವ 90 ಲಕ್ಷ ಎಕರೆ ಹಿಡುವಳಿ ಜಮೀನಿನಲ್ಲಿ ವ್ಯವಸಾಯಾರ್ಹವಾದದ್ದು (cultivable) ಸುಮಾರು 60 ಲಕ್ಷ ಎಕರೆಯಷ್ಟಿದೆ.

1948ನೆಯ ಇಸವಿ ಆಗಸ್ಟ್ ತಿಂಗಳಿನಲ್ಲಿ ಸಂಸ್ಥಾನದ ಭೂಕಂದಾಯ ನೀತಿಯನ್ನು ಪರಿಶೀಲಿಸಿ ನುಲಹೆ ಮಾಡಲು ಶ್ರೀ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಸರ್ಕಾರದವರು ನಿಯಮಿಸಿದ್ದು ಸಭೆಯವರೆಲ್ಲರಿಗೂ ಗೊತ್ತಿದೆ. ಆ ಸಮಿತಿಯವರು ಹಲವಾರು ವಿಚಾರಗಳನ್ನು ವಿಮರ್ಶಿಸಿ ಒಂದು ವರದಿ ಕಳೆದ ತಿಂಗಳಲ್ಲಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅವರ ಶಿಫಾರಸುಗಳನ್ನು ಸರ್ಕಾರದವರು ಪರ್ಯಾಲೋಚನೆ ಮಾಡುತ್ತಿದ್ದಾರೆ. ಆ ಸಮಿತಿಗೆ ಪರಿಶೀಲನೆಗಾಗಿ ವಹಿಸಿದ್ದ ವಿಚಾರಗಳಲ್ಲಿ ಇನಾಂ ಗ್ರಾಮಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಕುರಿತು ಇನಾಂ ಗ್ರಾಮಗಳಲ್ಲರುವ ಇನಾಂದಾರರಿಗೆ ಸೇರಿರುವ ಜಮೀನುಗಳನ್ನು ರದ್ದುಮಾಡಬಹುದೆ ಎಂಬ ಬಗ್ಗೆ ಸಲಹೆ ಮಾಡಬೇಕೆಂಬುದೂ ಒಂದು. ಈ ವಿಚಾರ ಪ್ರಕಟಣೆಯಿಂದ ಕೆಲವು ದಿವಸಗಳಲ್ಲೇ ಕೆಲವು ಇನಾಂದಾರರು ಕೆಲವು ಕಡೆಗಳಲ್ಲಿ ಅವರ tenants ಗೆ ತೊಂದರೆ ಕೊಡುವುದಕ್ಕೆ ಪ್ರಾರಂಭ ಮಾಡಿದರೆಂದು ನಮಗೆ ವರದಿಗಳು ಬಂದವು. ಕೆಲವು ಕಡೆ ತುಂಬಾ ಅನ್ಯಾಯಗಳಾಗುತ್ತಿವೆ ಎಂದೂ, ಅನ್ಯಾಯವಾಗಿ ರೈತರ ಸ್ವಾಧೀನದಲ್ಲಿದ್ದ ಜಮೀನುಗಳನ್ನು ಅವರಿಂದ ತಪ್ಪಿಸಲು ಇನಾಂದಾರರು ಪ್ರಯತ್ನಪಟ್ಟದ್ದಲ್ಲದೆ ಆ ಜಮೀನುಗಳಲ್ಲದ್ದ ಅನೇಕ ಬೆಲೆ ಬಾಳುವ ಮರಗಳನ್ನು ಕಡಿದು ಸಾಗಿಸಲು ಪ್ರಾರಂಭ ಮಾಡಿದರೆಂಬುದೂ ಅನೇಕ ರೈತರ ಮೂಲಕ ಮತ್ತು ಇತರ ಕಡೆಗಳಿಂದ ಗೊತ್ತಾಯಿತು. ಸರ್ಕಾರದವರು ಇದನ್ನು ತಕ್ಷಣ ನಿಲ್ಲಿಸುವುದು ಅವಶ್ಯಕವೆಂದೂ, ಸಮಿತಿಯ ಶಿಫಾರಸುಗಳನ್ನೆಲ್ಲಾ ವಿಮರ್ಶಿಸಿ ಸೂಕ್ತವಾದ ಒಂದು ಮಸೂದೆಯನ್ನು ತಂದು ಅದನ್ನು ಕಾನೂನಾಗಿ ಜಾರಿ ಮಾಡಿದಾಗ ಅದರ ಉದ್ದೇಶ ಸಫಲವಾಗಬೇಕಾದರೆ ಇಂಥ ತೊಂದರೆಗಳನ್ನು ತಡೆಗಟ್ಟಲು ತಾತ್ಕಾಲಿಕವಾಗಿ ಏನಾದರೂ ಏರ್ಪಾಡು ಮಾಡಬೇಕೆಂದು ಯೋಚಿಸಿದೆವು. ಶ್ರೀ ಗುಂಡಪ್ಪಗೌಡರು ಹಿಂದಿನ ಮಸೂದೆಯ ವಿಷಯದಲ್ಲಿ ಒಂದು ಮಾತನಾಡಿದರು. ಇಂತಹ ಸಂದರ್ಭದಲ್ಲಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದವರಿಗೆ ಕಂಡ ತಕ್ಷಣವೇ ಆಗ ಜಾರಿಯಲ್ಲಿದ್ದ 1940ನೆಯ ಇಸವಿಯ ಮೈಸೂರು ಸರ್ಕಾರದ ಅಕ್ಟಿನ ಪ್ರಕಾರ ಸರ್ಕಾರದವರಿಗಿದ್ದ ಅಧಿಕಾರವನ್ನುಪಯೋಗಿಸಿ 1949ನೆಯ ಡಿಸೆಂಬರ್ 12ನೆಯ ತಾರೀಖಿನ ದಿನ The Mysore Alienated Villages (Protection of Tenants and Miscellaneous Provisions) (Emergency) Act, 1949 (LXXVI) of 1949) ಎಂಬ ಅವಸರದ ಕಾನೂನನ್ನು ಜಾರಿಗೆ ತರಲಾಯಿತು. ಆ ಕಾನೂನಿನ ಅವಧಿ ಆರು ತಿಂಗಳು ಮಾತ್ರ. ಆದ್ದರಿಂದ 1950ನೆಯ ಜೂಕ್ ತಿಂಗಳು 11ನೆಯ ತಾರೀಖಿಗೆ ಮುಗಿಯುವುದಾಗಿತ್ತು. ಆಗ ಇನ್ನೂ ಸಮಿತಿಯವರ ಶಿಫಾರಸು ಬಂದು ಅವು ಸರ್ಕಾರದಿಂದ ಪರಿಶೀಲಿಸಲ್ಪಟ್ಟು ಅವುಗಳ ಮೇಲೆ ಸರ್ಕಾರಿ ಆಜ್ಞೆ ಆಗಿ ಕಾನೂನಾಗಿ ಜಾರಿಗೆ ಬರಬೇಕಾದರೆ ಇನ್ನೂ ಸ್ವಲ್ಪ ಕಾಲವಾಗುವ ನಿರೀಕ್ಷಣೆಯಿದ್ದುದರಿಂದ ಅವಸರದ ಕಾನೂನಿನಲ್ಲಿದ್ದ ವಿಧಿಗಳು ಅಷ್ಟರವರೆಗೆ ಜಾರಿಯಲ್ಲಿರಬೇಕಾದುದು ಅವಶ್ಯಕವೆಂದು ಕಂಡುಬಂದ ಕಾರಣ ಭಾರತ ರಾಜ್ಯಾಂಗದ 213ನೆಯ ವಿಧಿಯನ್ನನುಸರಿಸಿ The Mysore Alienated Villages (Protection of Tenants and Miscellaneous Provisions) Ordinance, 1950 (Ordinance IV

of 1950) ಎಂಬ ಅವಸರದ್ದ ಕಾನೂನನ್ನು 1950 ನೆಯ ಜೂಲೈ ತಿಂಗಳಲ್ಲಿ ಜಾರಿಗೆ ತರಲಾಯಿತು. 1950ನೆಯ ಇಸವಿ ಜನವರಿ ತಿಂಗಳಲ್ಲಿ ಇನಾಂ ಗ್ರಾಮಗಳ ವಿಚಾರದಲ್ಲಿ ಆ ಸಮಿತಿಯವರು ಒಂದು ಇಂಟೆರಿಮ್ ವರದಿಯನ್ನು ಕಳುಹಿಸಿದ್ದರು. ಆಗ ಒಂದು ಮಸೂದೆ ತಯಾರಿಸಿ ತರಬಹುದಾಗಿತ್ತೆಂದು ಕೆಲವರು ಹೇಳಬಹುದು. ಆದರೆ ಅವರ ಶಿಫಾರಸುಗಳೆಲ್ಲವನ್ನೂ ಕ್ರೋಢೀಕರಿಸಿ ಒಂದೇ ಮಸೂದೆಯನ್ನು ತಯಾರಿಸಿ ಸಭೆಯ ಮುಂದೆ ತಂದು ಪರಿಶೀಲನೆ ಮಾಡಿ ಆದಷ್ಟು ಬೇಗ ಕಾನೂನು ಜಾರಿಗೆ ತರುವುದು ಉತ್ತಮವೆಂಬ ಅಭಿಪ್ರಾಯ ಬಂದಕಾರಣ ಹಾಗೆ ಮಾಡಲಲ್ಲ, ಆ ವರದಿ ಹಾಗೆಯೇ ನಿಂತಿತು. ಈಗ ಆ ಸಮಿತಿಯ ಪೂರ್ಣ ವರದಿ ಸರ್ಕಾರಕ್ಕೆ ಬಂದಿದೆ. ಅದರಲ್ಲಿರುವ ಶಿಫಾರಸುಗಳನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಎಮರ್ಜೆನ್ಸಿ ಆರ್ಡಿನೆನ್ಸ್ ಸಾದರು ಮಾಡಿ, ಈ ಎಮರ್ಜೆನ್ಸಿಯ ಆಕ್ಟನ್ನು ಜಾರಿಗೆ ತರುವುದರ ಮುಖ್ಯ ಉದ್ದೇಶವೆಂದರೆ ಈ ಮಸೂದೆ ಅಂಗೀಕಾರವಾಗಿ ಜಾರಿಗೆ ಬರುವವರೆಗೂ ಚೆನೆಂಟುಗಳ ಹಕ್ಕುಬಾಧ್ಯತೆಗಳಿಗೆ ರಕ್ಷಣೆ ಕೊಡುವುದೇ ಆಗಿತ್ತು. ಆ ಉದ್ದೇಶ ನೆರವೇರಬೇಕಾದರೆ ಇನಾಂದಾರರು ಮಾಡತಕ್ಕ ಕೆಲಸಗಳನ್ನು ಎಂದರೆ ಜಮೀನನ್ನು ಚೆನೆಂಟುಗಳ ಸ್ವಾಧೀನದಿಂದ ತಪ್ಪಿಸುವುದಕ್ಕೆ ಪ್ರಯತ್ನಪಡುವುದನ್ನು ನಿಲ್ಲಿಸುವುದು, ಎರಡನೆಯದಾಗಿ ಬೆಲೆ ಬಾಳುವಂಥ ಮರಗಳನ್ನು ಕಡಿದು ಸಾಗಿಸದೇ ಇರುವಂತೆ ನೋಡಿಕೊಳ್ಳುವುದು ಮತ್ತು ವ್ಯವಸಾಯಕ್ಕೆ ಯೋಗ್ಯವಾದ ಜಮೀನುಗಳನ್ನು ವ್ಯವಸಾಯಕ್ಕಲ್ಲದೆ ಬೇರೆ ಕೆಲಸಗಳಿಗೆ ಉಪಯೋಗಿಸದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕವಾಗಿತ್ತು. ಇನ್ನೊಂದು ವಿಶೇಷ ಸಂದರ್ಭ, ನ್ಯಾಯವಾದದ್ದು ಎಂದರೆ ಸರ್ಕಾರಿ ಗ್ರಾಮಗಳಲ್ಲಿ ಮಳೆ ಸಾಲದೆ ಬೆಳೆ ಸಾಕಾದಷ್ಟು ಆಗದೇ ಇರುವಾಗ ರೆಮಿಷ್ಷ ಕೊಡತಕ್ಕ ಸಂದರ್ಭದಲ್ಲಿ ಯಾವ ರಿಯಾಯಿತಿಗಳನ್ನು ಕೊಡುತ್ತಾರೋ ಅದೇ ರಿಯಾಯಿತಿಗಳು ಎಲಿನಿಯೇಟೆಡ್ ಏರೇಜಸ್‌ನಲ್ಲಿರತಕ್ಕ ಚೆನೆಂಟುಗಳಿಗೂ ಕೂಡ ಅನ್ವಯಿಸತಕ್ಕದ್ದು ಅವಶ್ಯಕವೆಂದು ಕಂಡು ಬಂದು ಅದನ್ನೂ ಕೂಡ ಸೇರಿಸಿದೆ. ಒಟ್ಟಿನಲ್ಲಿ ಚೆನೆಂಟುಗಳಿಗೆ ತಾತ್ಕಾಲಿಕವಾಗಿ ರಕ್ಷಣೆ ಕೊಡುವ ಉದ್ದೇಶದಿಂದ ಈ ಆರ್ಡಿನೆನ್ಸ್‌ನ್ನು ಪಾಸ್ ಮಾಡಿದರು. ರಾಜ್ಯಾಂಗದ 230ನೇ ಆರ್ಟಿಕಲ್ ಪ್ರಕಾರ ಅಸೆಂಬ್ಲಿ ಆದ 6 ವಾರದ ನಂತರ ಈರೀತಿ ಪಾಸ್ ಆದಂಥ ಆರ್ಡಿನೆನ್ಸ್‌ಗಳು ಜಾರಿಯಲ್ಲಿರುವುದಿಲ್ಲ. ಆದ್ದರಿಂದ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಹಾಕಲು ಅವಕಾಶ ಇಲ್ಲ. ಏಕೆಂಥರೆ ಪುನಃ ನಮ್ಮ ಅಸೆಂಬ್ಲಿ ಮುಂದಿನ ನವೆಂಬರ್ 9–10ರೊಳಗೆ ಸೇರಬಹುದು. ಅಲ್ಲಿಯವರೆಗೆ ಇದು ಜಾರಿಯಲ್ಲಿರುವುದಕ್ಕಾಗುವುದಿಲ್ಲ. ಆ ಮಧ್ಯಕಾಲದಲ್ಲಿ ಬಹಳ ಅನರ್ಥಗಳುಂಟಾಗಬಹುದು.

ಅಧ್ಯಕ್ಷರು.—ಇದು ಡಿಸೆಂಬರ್‌ನಲ್ಲಿ ಅಲ್ಲವೇ ಆದದ್ದು?

ಶ್ರೀ ಎಚ್. ಸಿದ್ದಯ್ಯನವರು:—ಎಮರ್ಜೆನ್ಸಿ ಆಕ್ಟು ಡಿಸೆಂಬರ್‌ನಲ್ಲಿ ಆಯಿತು, ಫಸ್ಟ್ ಆರ್ಡಿನೆನ್ಸ್ ಆಕ್ಟು ಜೂಲೈನಲ್ಲಿ ಆಯಿತು.

Sri L. SIDDAPPA.—(Shimoga District—General) This is the second ordinance.

Sri H. SIDDAIYA.— This is not the second ordinance. First Emergency Act was passed under the old Government of Mysore Act, 1940. The first ordinance was in June.

ಅಧ್ಯಕ್ಷರು.—ಮಾರ್ಚ್‌ನಲ್ಲಿ ಈ ಅಸೆಂಬ್ಲಿಯು ಒಂದು ಅಧಿವೇಶನ ಇರಲಿಲ್ಲವೇ?

ಶ್ರೀ ಎಚ್. ಸಿದ್ದಯ್ಯನವರು.—Then it was in force according to section 31 of the Government of Mysore Act, 1940. ಆರು ತಿಂಗಳವರೆಗೆ ಜಾರಿಯಲ್ಲಿತ್ತು. ಜೂಲೈನಲ್ಲಿ ಅದರ ಅವಧಿ ಮುಗಿದುಹೋದದ್ದರಿಂದ ಅದನ್ನು ಮುಂದುವರಿಸಬೇಕಾದ ಅವಶ್ಯಕತೆಯುಂಟಾಯಿತು. ಆಗ ಅಸೆಂಬ್ಲಿ ಅಧಿವೇಶನ ಇರಲಿಲ್ಲ. It became an ordinance for the first time under article 230 of the Constitution of India. ಅದು ಏನೇ ಇರಲಿ, ಹೊಸದಾಗಿ ಈ ಮಸೂದೆಯನ್ನು ಸಭೆಯ ಮುಂದೆ ತಂದಿದ್ದೇವೆ ಎಂದು ಭಾವಿಸಿಕೊಂಡರೆ ಇದರ merits ಮತ್ತು demerits ಪರಿಶೀಲನೆ ಮಾಡುವುದಕ್ಕೆ ಅವಕಾಶವಿದೆ. ಈ ವಿಷಯದಲ್ಲಿ ಸಮಿತಿಯವರು ಕಳುಹಿಸಿರುವ ಆಜ್ಞೆಯ ತೀರ್ಮಾನವನ್ನು ಸರ್ಕಾರದವರು ಪರಿಶೀಲನೆ ಮಾಡಿ ಒಂದು ಆಕ್ಟ್ ಪಾಸ್ ಮಾಡುವವರೆಗೂ ಇದು ಜಾರಿಯಲ್ಲಿರಬೇಕಾಗುತ್ತದೆ. ಡಿಸೆಂಬರ್ 1952ರವರೆಗೂ ಇದು ಜಾರಿಯಲ್ಲಿರಬೇಕೆಂದು ಮಾಡಿದ್ದೇವೆ. ಹೇಗಾದರೂ ಈಗ ಇದರ ಅವಶ್ಯಕತೆ ಕಂಡುಬಂದಿದೆಯಾದ್ದರಿಂದ ಈ ಮಸೂದೆಯನ್ನು ಸಭೆಯವರ ಅನುಮೋದನೆಗೆ ಮಂಡಿಸುತ್ತೇನೆ.

Mr. SPEAKER.—Motion moved.

"That the Mysore Alienated Villages (Protection of Tenants and Miscellaneous Provisions) Bill, 1950 be taken into consideration."

Sri T. Ramachar has tabled an amendment that the Bill be referred to a Select Committee. Since the Hon'ble Member is not present, it lapses.

*ಶ್ರೀ ಎರ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಅಧ್ಯಕ್ಷರೇ, ಈಗ ಸಭೆಯ ಮುಂದಿಡತಕ್ಕ ಮಸೂದಾ ಕಾನೂನಿನ merits ಮೇಲೆ ಮಾತನಾಡುವುದಕ್ಕಿಂತ ಮುಂಚೆ ಈ ವಿಚಾರದಲ್ಲಿ ಸರ್ಕಾರದವರು ತೆಗೆದುಕೊಂಡಿರತಕ್ಕ ಕಾರ್ಯಕ್ರಮದ ವಿಷಯದಲ್ಲಿ ನಾನು ಒಂದೆರಡು ಅಂಶಗಳನ್ನು ಹೇಳಬೇಕಾಗಿದೆ. ಈ ಮಸೂದೆಯನ್ನು ಸಭೆಯ ಮುಂದೆ ಮಂಡಿಸುವಾಗ ಮಾನ್ಯ ರೆವಿನ್ಯೂ ಸಚಿವರು ಕೊಟ್ಟ ಭಾಷಣದಿಂದ ಎರಡು ಮೂರು ವಿಷಯಗಳು ಕಂಡುಬರುತ್ತವೆ. ಮೊದಲನೆಯದು, ಹಿಂದೆ ಇದ್ದ Government of Mysore Act, 1940, section 31 ರ ಪ್ರಕಾರ ಎಮರ್ಜೆನ್ಸಿ ಆಕ್ಟ್ ಯಾವುದು ಇದೆಯೋ ಅದು ಈ ಶಾಸನ ಸಭೆಯಲ್ಲಿ ಮಾಡಿದ್ದಲ್ಲ. ಅದರ ಪ್ರಾವಿಜಿಷ್ ಈರೀತಿ ಇದೆ:

"Section 31: (1) If at any time the Government is satisfied that circumstances exist which render it necessary to take immediate action in matters other than those falling under section 29, the Government may frame any measure required for the purpose.

ಇದು ಆರ್ಡಿನೆನ್ಸ್ ಅಲ್ಲ, ಎಮರ್ಜೆನ್ಸಿ ಆಕ್ಟ್ ಹೊಸ ಕಾನ್‌ಸ್ಟಿಟ್ಯೂಷನ್ ಪ್ರಕಾರ ಹಿಂದೆ ಇದ್ದದ್ದೇ ಜಾರಿಯಲ್ಲಿದ್ದು ಆರ್ಡಿನೆನ್ಸ್ ಎಂಬುದಾಗಿ ಕರೆಯಲ್ಪಡುತ್ತಾ

ಇತ್ತು. ಎಮರ್ಜೆನ್ಸಿ ಆಕ್ಟ್ ಎಂದು ಕರೆಯಲ್ಪಟ್ಟಾಗ ಅದಕ್ಕೆ ಕೆಲವು ಮಿತಿಗಳಿವೆ. ಅವು ಯಾವುವೆಂದರೆ.—

"(2) Every such measure shall have the force of law on receiving the assent of His Highness the Maharaja for such period not exceeding six months as may be specified therein,—

(a) but may by a similar measure be extended for a further period not exceeding six months; and

(b) may be withdrawn at any time by His Highness the Maharaja."

ಈ ಸಂದರ್ಭದಲ್ಲಿ ಒಂದು ವಿಶೇಷ ಸಂದರ್ಭ ಏನಾಯಿತು ಎಂದರೆ ಈ ವರ್ಷ ಜನವರಿ 26ನೇ ತಾರೀಖಿನ ದಿನ ಇಂಡಿಯನ್ ರಿಪಬ್ಲಿಕ್ ಪ್ರೆಸಿಡೆಂಟರು ಕಾನ್ಸ್ಟಿಟ್ಯೂಷನ್ ಆಫ್ ಇಂಡಿಯಾವನ್ನು ಪ್ರೊಮಲ್ಗೇಟ್ ಮಾಡಿದರು. ಅದಾದನಂತರ ಹೊಸ ಕಾನ್ಸ್ಟಿಟ್ಯೂಷನ್ ಪ್ರಕಾರ ಮಾರ್ಚ್ ತಿಂಗಳಿನಲ್ಲಿ ಈ ಸಭೆಯು ಅಧಿವೇಶನ ನಡೆಯಿತು. ಆಗ ಆ ಎಮರ್ಜೆನ್ಸಿ ಆಕ್ಟ್‌ನ್ನು ಈ ಸಭೆಯು ಮುಂದೆ ತರಬೇಕಾಗಿತ್ತು. ಆದರೆ, ಆರೀತಿ ತರಬೇಕಾಗಿಲ್ಲ ಸೆಕ್ಷನ್ 31ರ ಪ್ರಕಾರ 6 ತಿಂಗಳ ಅವಧಿ ಇತ್ತು, 6 ತಿಂಗಳು ಆಗಿರಲಿಲ್ಲ, ಇನ್ನು ಮೂರು ತಿಂಗಳ ಅವಕಾಶವಿತ್ತು ಎಂದು ಹೇಳಿ ಕಾನೂನಿನೊಳಗೆ ತೂರಿಕೊಳ್ಳಬಹುದು. ಆದರೆ ಅಸಾಧಾರಣ ಪರಿಸ್ಥಿತಿಯಲ್ಲಿ ಇಂಥಾ ಕಾರ್ಯಕ್ರಮ ತೆಗೆದುಕೊಂಡು ನಂತರ ಈ ಸಭೆ ಸೇರಿದಾಗ ಸಭೆಯ ಮುಂದಿಟ್ಟು ಕಾನೂನು ಮಾಡುವ ಕೆಲಸ ಸರ್ಕಾರದವರ ಜವಾಬ್ದಾರಿ. ಆರೀತಿ ಮಾಡಲಿಲ್ಲ. ಎರಡನೆಯದಾಗಿ ಇನ್ನೊಂದು ವಿಷಯ ಇದೆ. ಭಾರತ ರಾಜ್ಯಾಂಗ ಶಾಸನದ 213 (1)ನೆಯ ಉಪವಿಧಿಯಲ್ಲಿ ಹೀಗೆ ಹೇಳಿದೆ:

Article 213 "(1) If at any time, except when the Legislative Assembly of a State is in session, or where there is a Legislative Council in a State, except when both Houses of the Legislature are in session, the Governor is satisfied that circumstances exist which render it necessary for him to take immediate action, he may promulgate such Ordinances as the circumstances appear to him to require.

Provided that the Governor shall not, without instructions from the President, promulgate any such Ordinance in....."

In sub-article (2) it is stated as follows:

"An Ordinance promulgated under this article shall have the same force and effect as an Act of the Legislature of the State assented to by the Governor, but every such Ordinance—

(a) shall be laid before the Legislative Assembly of the State, or where there is a Legislative Council in the State, before both the Houses, and shall cease to operate at the expiration of six weeks from the reassembly of the Legisiature, or if before the expiration of that period a resolution ....."

Of course that does not arise because no one has sent up any resolution to disapprove of such legislation. My submission is that Government should have taken action to replace that Emergency Act when we met in March session. Not having done that I submit that the Emergency Act which was promulgated on 12th December 1949 and which was in operation when we met in March ceased to have force six weeks after we met here in March.

ಪ್ರಾಯಶಃ ಇದನ್ನು ದೃಷ್ಟಿಯಲ್ಲಿಟ್ಟುಕೊಂಡೋ ಏನೋ ಮಾನ್ಯ ರೆವಿನ್ಯೂ ಸಚಿವರು ಭಾಗವನ್ನು ವಿವರಿಸುತ್ತಾ ಏನೋ ಒಂದು ಅರ್ಥ ಬರುವಂತೆ ಒಂದು ಮಾತು ಹೇಳಿದರು: 'ಅದೇನೇ ಇರಲಿ, ಮಾಡಿದ್ದು ಅವಿವೇಕ ವೆಂದು ಪರಿಗಣಿಸಿದರೆ ಇದನ್ನೇ ಒಂದು ಹೊಸ ಬಿಲ್ಲಾಗಿ ತೆಗೆದುಕೊಳ್ಳಿರಿ' ಎಂದು.

ಶ್ರೀ ಎಚ್. ಸಿದ್ದಯ್ಯನವರು.—'ಅವಿವೇಕ' ಎಂದು ಹೇಳಲಿಲ್ಲ. If there is a doubt you may...

ಶ್ರೀ ಎಲ್. ಸಿದ್ದಪ್ಪನವರು.—ನನ್ನ ದೃಷ್ಟಿಯಲ್ಲಿ ಅವಿವೇಕವೆಂದು ಹೇಳಿಕೊಂಡ ಹಾಗೆ ತೋರಿತು.

ಶ್ರೀ ಎಚ್. ಸಿದ್ದಯ್ಯನವರು.—ಬೇರೆ ಯಾವ ಶಬ್ದವೂ ಸಿಕ್ಕಲಿಲ್ಲವೇ?

ಶ್ರೀ ಎಲ್. ಸಿದ್ದಪ್ಪನವರು.—ಅದೇನಾದರೂ ಆಗಲಿ, ಇದನ್ನೇ ಹೊಸ ಬಿಲ್ ಎಂದು ಪರಿಗಣಿಸಿ ಎಂದು ಹೇಳಿದ್ದು ನಿಜ. ಸರ್ಕಾರದವರು ಡಿಸೆಂಬರ್ 12ನೆಯ ತಾರೀಖಿನಲ್ಲಿ ಇದನ್ನು ಒಂದು ಜರೂರಾತಿ ಕಾನೂನಾಗಿ ಜಾರಿಗೆ ತಂದರು. ಅಲ್ಲಿಂದಾಚೆಗೆ ಮುಂದಿನ ಅಧಿವೇಶನ ಬರುವುದಕ್ಕೆ ಮೂರು ತಿಂಗಳ ಕಾಲ ಆಯಿತು. ಸರ್ಕಾರದವರಿಗೆ ಮನಸ್ಸಿದ್ದರೆ ಆಗಲೆ ಒಂದು ಹೊಸ ಮಸೂದೆಯಾಗಿ ಇದನ್ನು ತಂದು ಜರೂರಾತಿ ಕಾನೂನನ್ನು ತೆಗೆದು ನರಿಯಾದ ಕಾನೂನನ್ನೇ ಜಾರಿಗೆ ತರಬಹುದಾಗಿತ್ತು. ಆ ರೀತಿ ಯಾವ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಇವರು ಕಾರ್ಯಕ್ರಮ ಎಷ್ಟರಮಟ್ಟಿಗೆ ನಡೆಸುತ್ತಿದ್ದಾರೆಂಬ ವಿಷಯದಲ್ಲಿ ಇಷ್ಟು ವಿಶದವಾಗಿ ಹೇಳುವುದರ ಉದ್ದೇಶವಿಷ್ಟೆ. ಈಗ ತಾನೆ ಇದಕ್ಕೆ ಹಿಂದಿನ ಮಸೂದೆಯನ್ನು ಚರ್ಚೆಮಾಡುತ್ತಿದ್ದಾಗ "we do not want to rule by ordinance", ಏನೋ ಜರೂರಾತಿ ಸಂದರ್ಭಗಳು ಬಂದಾಗ ಮಾತ್ರ ಆರ್ಡಿನೆನ್ಸ್‌ಗಳನ್ನು ಮಾಡುತ್ತೇವೆಂದು ಹೇಳಿದರು. ಇಲ್ಲ ನೋಡುವುದಾದರೆ, ಮೊದಲು ಒಂದು ಎಮರ್ಜೆನ್ಸಿ ಕಾನೂನುನಿದ್ದು, ಆಮೇಲೆ ಆರ್ಡಿನೆನ್ಸ್‌ಗಿ ಮಾಡಿಕೊಂಡು ತಾವೇ ತಮ್ಮ ಇಚ್ಛೆಯಂತೆ ರೂಲ್ಸ್ ರೆಗ್ಯುಲೇಷನ್‌ಗಳನ್ನು ಮಾಡಿಕೊಳ್ಳುತ್ತಿದ್ದೀರಿ. ಕಾನೂನಿದ್ದಲ್ಲಿ ಹಾಗೆ ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳಬಹುದು. ಆದರೂ ಒಂದು ಜರೂರಾತಿ ಕಾನೂನು ತಂದು ಅದನ್ನೇ ಮುಂದುವರಿಸಿಕೊಂಡು ಹೋಗಿ rule ಮಾಡುವುದು ದೇಶದ ಹಿತದೃಷ್ಟಿಯಿಂದ ಸಾಧುವಲ್ಲವೆಂದು ಹೇಳುತ್ತೇನೆ.

ಎರಡನೆಯದಾಗಿ, ಲ್ಯಾಂಡ್ ರಿವಿಜ್ ಕಮಿಟಿಯನ್ನು ನೇಮಕ ಮಾಡಿದ ಮೇಲೆ, ಆ ಕಮಿಟಿಯವರು ಕಳುಹಿಸಿಕೊಟ್ಟ ಶಿಫಾರಸ್ಸುಗಳ ಮೇಲೆ ಸರ್ಕಾರದವರು ಕೈಗೆಕೊಂಡಿರುವ ಕಾರ್ಯಕ್ರಮಗಳ ವಿಚಾರ ಹೇಳುತ್ತೇನೆ. ಇದೇ ವಿಚಾರದಲ್ಲಿ ಮೊನ್ನೆ ಶುಕ್ರವಾರದ ದಿನ ಈ ಸಭೆಯಲ್ಲಿ ಒಂದು ಪ್ರಶ್ನೆ ಚರ್ಚೆಗೆ ಬಂತು. ಆ ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ರೆವಿನ್ಯೂ ಸಚಿವರು ಹೇಳಿದರು. "ಇದನ್ನೇನೋ ಕಮಿಟಿಯವರು ಬಹಳ ತೀವ್ರವಾಗಿ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾದ ವಿಷಯ, ಎಲ್ಲವನ್ನೂ ಪರಿಶೀಲನೆಮಾಡಿ ತೀರ್ಮಾನ ಕಳುಹಿಸಿಕೊಡುವುದು ತಡವಾಗಬಹುದೆಂದು ಹೇಳಿ

ಇಂಟೆರಿಮ್ ವರದಿಯೊಂದನ್ನು ಜನವರಿ ತಿಂಗಳಿನಲ್ಲೇ ಕಳುಹಿಸಿಕೊಟ್ಟರೂ, ನಾವು ಇಂಟೆರಿಮ್ ವರದಿಯ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲ, ಮುಂದೆ ಆಖೈರು ವರದಿ ಬಂದ ಮೇಲೆ ಅದನ್ನೂ ಕೂಲಂಕಷವಾಗಿ ಪರಿಶೀಲಿಸಿ ಎಂಥವರಿಗೆ ಅನ್ಯಾಯವಾಗುತ್ತದೆ ಯಾರಿಗೆ ಅನ್ಯಾಯವಾಗುವುದಿಲ್ಲವೆಂಬುದನ್ನೆಲ್ಲಾ ಸರಿಯಾಗಿ ನೋಡಿಕೊಂಡು ಮಾಡೋಣವೆಂದು ಹೇಳಿ ಆಗಲೇ ಸರ್ಕಾರಿ ಹುಕುಮ್ ಮಾಡಲಿಲ್ಲ ಎಂದು ಹೇಳಿದರು. ಆದರೆ ನನ್ನ ಅಭಿಪ್ರಾಯದಲ್ಲಿ ಸರ್ಕಾರದವರಿಗೆ ಕಮಿಟಿಯವರ ಶಿಫಾರಸ್ಸು ಬಂದು ಆರು ತಿಂಗಳಾದರೂ, ಮೈಸೂರು ಸಂಸ್ಥಾನದಲ್ಲಿ ಮಾದರಿ ಸರ್ಕಾರವೆಂದು ಹೇಳಿಸಿಕೊಂಡ ಸರ್ಕಾರವಿದ್ದು, ಎಷ್ಟೋ ಸಂದರ್ಭಗಳಲ್ಲಿ ನಾವು ಇತರರಿಗೆ ಸಂಪ್ರದಾಯ ಹಾಕಿಕೊಟ್ಟಿರುವಂತೆ, ಈಗಲೂ ಆರೀತಿ ಅನುಸರಿಸಿ ಒಂದು ಸಂಪ್ರದಾಯವನ್ನು ಹಾಕಿಕೊಡಬಹುದಾಗಿತ್ತು. ಹಿಂದೆ ಹೇಗೆ ನಡೆಯುತ್ತಿತ್ತೆಂಬುದಕ್ಕೆ ಒಂದೇ ಒಂದು ಉದಾಹರಣೆ ಹೇಳುತ್ತೇನೆ. 1935ನೆಯ ಇಸವಿಯಲ್ಲಿ ಆಗಿದ್ದ ಸರ್ಕಾರಕ್ಕೆ ವಿಲೇಜ್ ಆಫೀಸರುಗಳನ್ನು ತೆಗೆದುಹಾಕಬೇಕೆಂದು ಶಾಸನ ಸಭೆಗಳಿಂದ ಮನವಿ ಆಗಾಗ್ಗೆ ಬರುತ್ತಲೇ ಇತ್ತು. ಆ ಮನವಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಒಂದು ವರದಿಯನ್ನು ಕೊಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಸಮಿತಿಯವರು ವರದಿಯನ್ನು ಕೊಟ್ಟನಂತರ ಆ ಕೂಡಲೆ ಅದನ್ನು ಪರಿಶೀಲನೆಮಾಡಿ ಸರ್ಕಾರಿ ಹುಕುಮು ಹೊರಡಿಸಿರುವುದನ್ನು ಇದೇ ಲ್ಯಾಂಡ್ ರಿವಿಷ್ಟ್ ಸಮಿತಿಯವರ ವರದಿಯಲ್ಲೂ ಮುದ್ರಿಸಿದೆ. ಅದನ್ನು ನೋಡಿದರೆ, ಹಿಂದಿದ್ದ ಸರ್ಕಾರಗಳು ಇಂಥ ವಿಷಯಗಳಲ್ಲಿ ಎಷ್ಟು ವಿಧದಲ್ಲಿ/ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದವೆಂಬುದು ಗೊತ್ತಾಗುತ್ತದೆ. ನೀವು ಈಗ ಅನುಸರಿಸುತ್ತಿರುವ ರೀತಿಯಿಂದ ಪ್ರಜೆಗಳಲ್ಲಿ ಎಷ್ಟು ತೊಂದರೆಯಾಗುತ್ತಿದೆಯೆಂಬದನ್ನು ಹೇಳಬೇಕಾಗಿಲ್ಲ! ಆ ಸರ್ಕಾರಿ ಹುಕುಮಿನಲ್ಲೇ ತಿಳಿಸಿರುವಂತೆ ಸರ್ಕಾರದವರು ಸಮಿತಿಯವರು ಮಾಡಿರುವ ಸೂಚನೆಗಳಲ್ಲಿ ಅಡಗಿರುವ ತತ್ವಗಳನ್ನು ಒಪ್ಪುತ್ತೇವೆಂದು ಹೇಳಿ ಕೊನೆಯಲ್ಲಿ ತಾವೇನು ಕಾರ್ಯಕ್ರಮ ಕೈಕೊಳ್ಳಬೇಕೆಂದಿದ್ದಾರೆಂಬುದನ್ನ ತಿಳಿಸಿದ್ದಾರೆ. ಅದರಲ್ಲಿ ಹೀಗೆ ಹೇಳಿದೆ:

"Separate action will be taken to have a bill prepared for amending the Mysore Village Offices Regulation on the lines of the Bombay Watan Act and to place it before the Representative Assembly and the Legislative Council."

Accordingly, I believe they drafted the Bill and they were about to place it before the then Legislature and for some reason it was not done.

Sri H. B. GUNDAPPA GOWDA.—They had placed it but it was withdrawn.

Sri L. SIDDAPPA.—Perhaps. ಅದೇ ರೀತಿಯಲ್ಲಿ ಈ ಸಂದರ್ಭದಲ್ಲಿಯೂ ನೀವೂ ಕೂಡ ಏಕೆ ಕಾರ್ಯಕ್ರಮ ಕೈಕೊಳ್ಳಬಾರದಾಗಿತ್ತು? ಕಮಿಟಿಯವರು ಕಳುಹಿಸಿಕೊಟ್ಟಿದ್ದ ಇಂಟರಿಮ್ ವರದಿಯನ್ನೇ ಪರಿಶೀಲನೆಮಾಡಿ ಅದು ನ್ಯಾಯವೆಂದು ಕಂಡುಬಂದ ಮೇಲೆ ಅದಕ್ಕನುಸಾರವಾಗಿ ಸೂಕ್ತ ಸರ್ಕಾರಿ ಹುಕುಮನ್ನು ಹೊರಡಿಸಿ ನಂತರ ಒಂದು ಬಿಲ್ಲನ್ನು ಈ ಸಭೆಯ ಮುಂದಿಡುವುದಕ್ಕೆ ಪ್ರಯತ್ನ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಬರೀ ಎಮರ್ಜೆನ್ಸಿ ಕಾನೂನು, ಆರ್ಡಿನೆನ್ಸ್‌ಗಳನ್ನು ಮಾಡಿಕೊಂಡು ಹೋಗುವುದು ಖಂಡಿತ ನರಿಯಲ್ಲ.

ಇನ್ನು merits ಮೇಲೆ ಹೋಗುವುದಾದರೆ,—1950ನೆಯ ಇಸವಿ ಜನವರಿ 26ನೆಯ ತಾರೀಖಿನ ಹಿಂದೆ ಈ ವಿಚಾರದಲ್ಲಿ ಯಾವ ಪ್ರಶ್ನೆಯೂ ಬರುವುದಿಲ್ಲ. ಆದರೆ ಅಲ್ಲಿಂದೀಚೆಗೆ ಇಂಡಿಯಾದ ಹೊಸ ರಾಜ್ಯಾಂಗ ಶಾಸನ ಜಾರಿಯಲ್ಲಿದೆ. ಈ ಹೊಸ ರಾಜ್ಯಾಂಗದ ಪ್ರಕಾರ ಮಸೂದೆಗಳನ್ನು ಮಂಡಿಸಬೇಕಾದರೆ ಹೇಗೆ ಮಂಡಿಸಬೇಕೆಂಬದನ್ನು ಯೋಚನೆಮಾಡಿ ನೋಡಬೇಕು. ಅದು ಹಿಂದಿನ ಕಾನೂನಿನ ನಿಯಮಗಳಿಗೇನಾದರೂ ವಿರೋಧವಾಗಿದೆಯೇ ಇಲ್ಲವೇ ಎಂಬದನ್ನು ನೋಡಬೇಕು. ಮೊನ್ನೆತಾನೆ ಸ್ಪೀಕರುಗಳ ಕಾರ್ಫರೆನ್ಸ್‌ನಲ್ಲಿಯೂ ಕೂಡ ಸಭೆಗಳ ಪ್ರಿವಿಲೇಜಸ್‌ಗಳಿಗೆ ಸಂಬಂಧಪಟ್ಟಂತೆ ಒಂದು ಕಾನೂನು ಮಾಡಬೇಕೇ ಬೇಡವೇ ಎಂಬ ಪ್ರಶ್ನೆ ಬಂದಾಗ ನೀವುಗಳೆಲ್ಲಾ ಹೆಚ್ಚಿನ ವಿಚಾರ ಪರತೆಯಿಂದ ಪರಿಶೀಲಿಸಿ, ಈಗಲೇ ಈ ಬಗ್ಗೆ ಕಾನೂನು ಮಾಡುವುದು ಸರಿಯಲ್ಲ. ಸ್ವಲ್ಪ ಕಾಲಾವಕಾಶ ತೆಗೆದುಕೊಂಡು ಕಾರ್ಫಿಸ್ಟಿಟ್ಯೂಷ್ಟ್ ರೀತ್ಯಾ ಏನೂ ತೊಂದರೆಯಾಗದಿರುವಂತೆ ಯೋಚನೆಮಾಡಿ ಮಾಡೋಣವೆಂದು ಹೇಳಿ ಸದ್ಯಕ್ಕೆ ಬಿಟ್ಟುಬಿಟ್ಟಿರಿ. Very advisedly you have all decided this matter. ಏಕೆಂದರೆ, ಇಂಥಾ ವಿಚಾರದಲ್ಲಿ ಯಾರಾದರೂ ಕೋರ್ಟಿಗೆ ಹೋಗಬೇಕಾಗುವ ಸಂದರ್ಭಗಳು ಬರಬಹುದೆಂದು ಹೇಳಿ ನೀವು ಬಿಟ್ಟಿದ್ದು ಬಹಳ ನ್ಯಾಯವಾಗಿದೆ.

ನಾನು ತಿಳಿದಿರುವ ಪ್ರಕಾರ, ನನ್ನ ಅಭಿಪ್ರಾಯ ವಿರುವುದು, ಈಗ ತಾವು ವಿಧಿಸಿರುವ ನಿರ್ಬಂಧಗಳು ಇಂಡಿಯನ್ ಕಾರ್ಸ್ಟಿಟ್ಯೂಷ್ಟ್ ಪ್ರೊವಿಷ್ಟ್ ಪ್ರಕಾರ ಎಂದರೆ ಆರ್ಟಿಕಲ್ 19 ಕ್ಲಾಸ್ (1) ಸಬ್‌ಕ್ಲಾಸ್ (ಎಫ್) ಪ್ರಕಾರ ವಿರೋಧವಾಗಿವೆ. ಈ 19 (1) (ಎಫ್) ಪ್ರೊವಿಷ್ಟ್ ಪ್ರಕಾರ ಯಾವ ಒಬ್ಬ ಇನಾಂದಾರನಿಗೇ ಆಗಲೀ ಅಥವಾ ಒಬ್ಬ ಖಾಯಂಗುತ್ತಾದಾರನಿಗೇ ಆಗಲೀ ಕೆಲವು ಹಕ್ಕುಗಳಿವೆ. ಆತನಿಗೆ ಕೊಡಲಾಗಿರುವ ನನ್ನಡುಗಳ ಪ್ರಕಾರ ಅವರವರ ಹಕ್ಕುಬಾಧ್ಯತೆಗಳನ್ನು ಚಲಾಯಿಸಲು ಅವರಿಗೆ ಹಕ್ಕಿರುತ್ತದೆ. ಅಂಥಾ ಹಕ್ಕನ್ನು ಚಲಾಯಿಸಲು ಅವಕಾಶ ಉಂಟಾಗದಂತೆ ತಾವೀಗ ಈ ಮಸೂದೆಯನ್ನು ತಂದಿದ್ದೀರೆಂದು ನಾನು ಭಾವಿಸಿದ್ದೇನೆ. Article (19) (f) ಪ್ರಕಾರ:—All citizens shall have the right to acquire, hold and dispose of property ಎಂದು ಅದರಲ್ಲಿ ಸ್ಪಷ್ಟವಾಗಿ ಹೇಳಿದೆ.

Sri H. C. LINGA REDDY.—What about proviso (5) to Article 19?

Sri L. SIDDAPPA.—

"(5) Nothing in sub-clauses (d), (e) and (f) of the said clause shall affect the operation of any existing law in so far as it imposes, or prevent the State from making any law imposing, reasonable restrictions on the exercise of any of the rights conferred by the said sub-clauses either in the interests of the general public or for the protection of the interests of any Schedule Tribe."

In that connection, I would like to invite the attention of my friend to article 31 of the Constitution on which there was a lot of discussion between

some State Governments which were likely to be affected and the Centra Government. Article 31 says :

Right to Property.

"(1) No person shall be deprived of his property save by authority of law.

"(2) No property, movable or immovable, including any interest in, or in any company owning, any commercial or industrial undertaking, shall be taken possession of or acquried for public purposes under any law authorising the taking of such possession or such acquisition, unless the law provides for compensation for the property taken possession of or acquired and either fixes the amount of the compensation, or specifies the principles on which, and the manner in which, the compensation is to be determined and given.

"(3) No such law as is referred to in clause (2) made by the Legislature of a State shall have effect unless such law, having been reserved for the consideration of the President, has received his assent."

This is the relevant clause which we have got to bear in mind.

Sri H. C. LINGA REDDY.—When a person is deprived of land, this refers to that. Here there is no question of deprivation of land.

Sri H. SIDDAIYA.—No question of acquisition.

Sri L. SIDDAPPA.—You want to restrict the right which he has over that property. Of course, there is provision for acquiring property in a certain manner and there are certain conditions imposed. Without trying to acquire that property in the manner prescribed under the Constitution and without giving any compensation whatever, you want to impose certain restrictions on the owner of the property. That is not legal.

Clause 4 of Article 31 says :

"If any Bill pending at the commencement f this Constitution in the Legislature of a State has, after it has been passed by such Legislature, been reserved for the consideration of the President and has received his assent, then notwithstanding anything in this Constitution, the law so assented to shall not be called in question in any court on the ground that it contravenes the provisions of clause (2)."

They may say that after this Constitution was promulgated there was already a law because the proviso (5) you referred to, refers to an existing aw. There was no doubt of an existing law but that existing law itself would not be valid in law after the promulgation of this Constitution. It has made one exception under article 31. That is in respect of measures which were then pending before the Legislature in the various States and which after assent by the President would become law. Only in such cases, there has been exemption. This provise (5) of article 19 does not come to your aid.

Sri H. C. LINGA REDDY.—If it is properly read, it will be clear. The State can impose new law restricting alienations and all that.

Sri L. SIDDAPPA.—Proviso (5) of Article 19 ;

"..... either in the interests of the general public or for the protection of the interests of any Scheduled Tribe."

Sri H. C. LINGA GEDDY.—".....,
or prevent the State from making any law imposing reasonable restrictions on the exercise of any of the rights conferred by the said clauses either in the interest..... "

Sri L. SIDDAPPA.—The Hon'ble Member seems to misinterpret it.

"Nothing in sub-clauses (d), (e) and (f) of the said clause shall affect the operation of any existing law in so far as it imposes, or prevent the State from making any law imposing reasonable restrictions....."

Art. 31 speaks only of a pending legislation before the State Legislature. It is clear in article 31 and they have given protection only in the case of certain measures which were then pending. For instance, in the Uttar Pradesh there was some measure pending. In the neighbouring Province of Madras there was some measure pending. It is only in those cases that an exemption has been granted under art 31.

Sri H. SIDDAIYA.—I would like to make the point a little clear. ಈ ಮಸೂದೆಯಲ್ಲಿ ಸೂಚಿಸಿರುವಂತೆ ಇದನ್ನು ತಂದಿರತಕ್ಕ ಉದ್ದೇಶ ಯಾವ ಸ್ವತ್ತುಗಳನ್ನೂ ವಶಪಡಿಸಿ ಕೊಳ್ಳುವುದಕ್ಕಾಗಿ ತಂದಿಲ್ಲ. ಆದುದರಿಂದ ಈ ಸಂಬಂಧದಲ್ಲಿ ಪರಿಹಾರ ಒದಗಿಸತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಯಾರು ಯಾರು ಈಗ ಹೆಚ್ಚಾಗಿ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೋ ಅವರುಗಳನ್ನೆಲ್ಲಾ ಉದ್ದೇಶಿಸಿ ಮಾತನಾಡುತ್ತಿದ್ದಾರೆ. ಆದರೆ ಆ ವಿಚಾರಕ್ಕೂ ಈ ಮಸೂದೆಗೂ ಏನೂ ಸಂಬಂಧವಿಲ್ಲ. ಶ್ರೀ ಎಲ್. ಸಿದ್ದಪ್ಪನವರು ಇದನ್ನು ಸ್ವಲ್ಪ ನಿಧಾನವಾಗಿ ಓದಿದರೆ

ಅವರಿಗೇ ಚೆನ್ನಾಗಿ ಅರ್ಥವಾಗುತ್ತದೆಯೆಂದು ತಿಳಿದಿದ್ದೇನೆ.

ಶ್ರೀ ಎಲ್. ಸಿದ್ದಪ್ಪನವರು.—ನಾನು ಚೆನ್ನಾಗಿಯೇ ಓದಿದ್ದೇನೆ. ಆದರೆ ನಾನೀಗ ಸಭೆಯ ಮುಂದೆ ನನ್ನ ಅಭಿಪ್ರಾಯವೇನೆಂಬುದನ್ನು ವ್ಯಕ್ತಪಡಿಸುತ್ತಿದ್ದೇನೆ. Proviso (5) applies only to existing law. ಹೀಗೆ ಚಲಾವಣೆಯಲ್ಲಿರುವ ಕಾನೂನಿನ ಪ್ರಕಾರ .....

Sri T. SUBRAMANYA.—'Or prevent the State from making any law.....'

Sri L. SIDDAPPA.—There is also another point suggested by my friend whether the Emergency Act which had been passed, is law. Those are certain doubts that have arisen in my mind and it is for the Revenue Minister to enlighten me on those points.

ಈ ಮಸೂದೆಯ ಗುಣಾವಗುಣಗಳ ಪ್ರಸ್ತಾಪಕ್ಕೆ ಹೋಗದೆ ಮತ್ತೊಂದು ಅಂಶವನ್ನು ನಾನು ಸ್ಪಷ್ಟಪಡಿಸಬೇಕಾಗಿದೆ. ಒಬ್ಬ ಖಾಯಂಗುತ್ತಾದಾರನಿಗೆ ಅಥವಾ ಒಬ್ಬ ಇನಾಂದಾರನಿಗೆ 100 ಅಥವಾ 500 ಎಕರೆ ಜಮೀನಿರಬಹುದು. ಅಷ್ಟಕ್ಕೋಸ್ಕರವಾಗಿಯೇ ಅಂಥವನ ವಿಚಾರದಲ್ಲಿ ಈ ರೀತಿಯ ಒಂದು ಕಾನೂನನ್ನು ತಂದು "ನೀನು ಹಾಗೆ ಮಾಡಬಾರದು. ಹೀಗೆ ಮಾಡಬಾರದು" ಎಂದು ನಿರ್ಬಂಧಕ್ಕೊಳಗುಮಾಡಿದ್ದೀರಿ. ಆದರೆ ಅದೇ 4,000–5,000 ಎಕರೆ ಜಮೀನುದಾರನಾದ ಪಟ್ಟೇದಾರ ರೈತನ ವಿಚಾರದಲ್ಲಿ ತಾವೇಕೆ ಹೀಗೆ ಹೇಳಿಲ್ಲ? ಒಬ್ಬನಿಗೆ ರಕ್ಷಣೆ ಮತ್ತೊಬ್ಬನಿಗೆ ಇಲ್ಲ ಎಂದು ಹೇಳುವುದು ಸರಿಯಾದುದೇ? ಅಂಥವನಿಗೆ ರಕ್ಷಣೆ ನೀಡುವುದಕ್ಕೆ ಸಮಿತಿಯವರು ನಲಹೆ ಏನು ಮಾಡಿದ್ದಾರೆ? ಅದು ಬಿಟ್ಟು ಖಾಯಂ ಗುತ್ತ ಇನಾಂ ಗ್ರಾಮಗಳಲ್ಲಿರುವವರಿಗೆ ರಕ್ಷಣೆಕೊಡಲು ಏಕೆ ಪ್ರಯತ್ನಪಡುತ್ತಿದ್ದೀರಿ? ಒಂದು ವೇಳೆ ರಕ್ಷಣೆ ಇರಬೇಕೆಂದು ಹೇಳುವುದಾದರೆ ಇನಾಂದಾರರಿಗೂ ಚೆನೆಂಟುಗಳಿಗೂ ಒಳ್ಳೆಯ ಸಂಪರ್ಕವಿರುತ್ತದೆಯೆ? ಎಲ್ಲ ವಿಷಯಗಳನ್ನೂ ಯೋಚನೆಮಾಡಿ ಬಾಕಿ ಜನಾಂಗ ದವರಿಗೂ ಅನುಕೂಲವಾಗುವಂತೆ ಒಂದೇ ಪೂರ್ಣ ವ್ಯಾಪ್ತಿಯುಳ್ಳ ಬಿಲ್ಲನ್ನು ತರದೆ ಇಷ್ಟು ಜಾಗ್ರತೆ ಕೇವಲ ಕೆಲವು ಜನರಿಗಾಗಿ ಈ ಬಿಲ್ಲನ್ನು ಏಕೆ ತರಬೇಕು? ಆದ್ದರಿಂದ ಕರ್ನಾಟಕ ಲೆಜಿಸ್ಲೇಟಿವ್ ಕಾನೂನು ತಂದ ಮೇಲೆ ನಾನು ಅಭಿಪ್ರಾಯವನ್ನು ಸೂಚಿಸುತ್ತೇನೆ. ಆದರಲ್ಲಿ ಸಮಿತಿ ಶಿಫಾರ್ಸಿರಬಹುದು. ಇನಾಂ, ಖಾಯಂಗುತ್ತ ಅಕ್ವೈರ್‌ಮಾಡಬೇಕೆಂದು ಶಿಫಾರ್ಸಿದೆಯೇ ವಿನಾ ವಿಶೇಷವಾದ ಹಿಡುವಳಿದಾರರ ಜಮೀನನ್ನು ತೆಗೆದು ಕೊಳ್ಳುವುದಕ್ಕೆ ಏನೂ ಇಲ್ಲ.

Sri H. SIDDAIYA.—That does not arise.

ಶ್ರೀ ಎಲ್. ಸಿದ್ದಪ್ಪನವರು.—ಹಾಗಿದ್ದ ಮೇಲೆ ಪೀಸ್ ಮೀಲ್ ಆಗಿ ಏಕೆ ತೆಗೆದುಕೊಳ್ಳಬೇಕು? ಎಷ್ಟು ಸಾಧ್ಯ ಮತ್ತು ಅಸಾಧ್ಯ ಎಂದು ನೋಡುವುದಕ್ಕೆ ಉದಾಹರಣೆಯೇನು? ಅದಕ್ಕೆ ಕಾರ್ಯಕ್ರಮ ಏನು ತೆಗೆದುಕೊಳ್ಳುತ್ತೀರಿ? ಇದೆಲ್ಲಾ ಸಮಸ್ಯೆಗಳಿರುವುದರಿಂದ ಇದನ್ನು ತರುವುದಕ್ಕಿಂತ ಕರ್ನಾಟಕ ಲೆಜಿಸ್ಲೇಟಿವ್ ಬಿಲ್ಲನ್ನು ತರುವುದು ಸೂಕ್ತ, ಅದು ಬಂದಾಗ ವಿಶದವಾಗಿ ಚರ್ಚಿಸಿ ಅಭಿಪ್ರಾಯವನ್ನು ಸೂಚಿಸುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ವಿಚಾರದಲ್ಲಿ ನಮ್ಮ ಮಾನ್ಯ ಮಿತ್ರರಾದ ಶ್ರೀ ಎಲ್. ಸಿದ್ದಪ್ಪನವರು ರಾಜ್ಯಾಂಗದ ಕಾನೂನು ಪ್ರಕಾರ ಕೆಲವು ವಿಷಯ ಗಳನ್ನು ಸೂಚಿಸಿದರು. ಸೆಕ್ಷನ್ 19 ಮತ್ತು 31ರ ಪ್ರಕಾರ ಏನೂ ತೊಂದರೆಯಿಲ್ಲ. ಪರಿಹಾರ ಕೊಡದೆ ಜಮೀನ್ದಾರಿಯನ್ನು ಸ್ವಾಧೀನಪಡಿಸಿಕೊಳ್ಳಬಾರದೆಂದು ಪ್ರಾವಿಷನ್ ಇದೆ. ಅದಕ್ಕೆ ಆ ಸಭೆಯ ಅನುಮತಿಯನ್ನು ತೆಗೆದುಕೊಂಡಿದೆ. ಅಲ್ಲಿ ಪರಿಹಾರದ ವಿಚಾರ ಚರ್ಚೆಯಾಗಿ ಅದನ್ನು ಕೊಡಬೇಕೆಂದು ಸಿದ್ಧಾಂತವಾಯಿತು. ಅಷ್ಟು ಹೊರತು ಈ ದಿವಸ ಈ ಬಿಲ್ಲಿನಲ್ಲಿ ಮಾಡಿರುವುದೇನು? ಅವರು ಹೇಳಿದ ಹಾಗೆ ಮಧ್ಯದಲ್ಲಿ ಒಂದು ಸಮಿತಿ ಮಾಡಿದೆ, ಆದರೆ ಇದರಿಂದ ಇನಾಂದಾರರ ರೈತರಿಗೆ ತೊಂದರೆಯಾಗಬಹುದು, ಮುರಗಿಡಗಳಿರುವುದು ಹೋಗಬಹುದು, ನಾಳೆ ಒಂದು ಜಮೀನು ಸೇರಿಲ್ಲವೆಂದು ಹೇಳಿದರೆ ಅದರಲ್ಲಿರುವ ಫಲವೃಕ್ಷ ಹೋಗಬಹುದು ಎಂದು ಕೈಹಾಕಿ ಮರಗಳನ್ನು ಕಡಿದು ಮಾರುತ್ತಲೂ, ಜಮೀನನ್ನು ವಿಲೇವಾರಿ ಮಾಡುತ್ತಲೂ ಇದ್ದಾರೆಂದು ಕೋಲಾರ ಜಿಲ್ಲೆಯಲ್ಲಿ ದೊಡ್ಡ ಗಲಾಟೆ ಯಾಗಿ ಮನವಿ ಬರತು; ದೂರು ಬಂತು; ಅನೇಕರು ಬಂದು ಕಷ್ಟವನ್ನು ಅರಿಕೆಮಾಡಿಕೊಂಡರು, ಆಗ ಆ ಸಮಿತಿಯಲ್ಲಿ ನಾನೂ ಇದ್ದೆ. ನಮ್ಮ ಸಮಿತಿಗೆ ದೂರು ಬಂದಾಗ ಅದು ನಮಗೆ ಸಂಬಂಧವಿಲ್ಲ, ಸರ್ಕಾರಕ್ಕೆ ಹೋಗಬೇಕು ಎಂದು ಹೇಳಿದೆವು. ಮುಂದೆ ಏನಾಗುತ್ತದೆಯೋ ಏನೊ ಎಂಬ ಶಂಕೆಯಿಂದ ಆದಷ್ಟು ಸಂಪಾದನೆ ಮಾಡಲು ಕೆಲವು ಇನಾಂದಾರರು ಹೊರಟರು. ಜಮೀನಿನಲ್ಲಿದ್ದ ಹುಣಸೆ ಮರ, ಬೇವಿನ ಮರ ಮುಂತಾದುವನ್ನು ಕಡಿಯುವುದಕ್ಕೆ ಪುರುಮಾಡಿದರು. ಗಿಡಗಳನ್ನು ಬೆಳೆಸಿ ದೊಡ್ಡದು ಮಾಡುವುದು ಕಷ್ಟ, ಕಡಿಯುವುದಕ್ಕೇನು ಕಷ್ಟ? ಫಲ ಬಿಡುವ ವೃಕ್ಷಗಳನ್ನು ಯಾವಾಗ ಕಡಿದು ಮಾರುವುದಕ್ಕೆ ಪ್ರಾರಂಭಿಸಿದರೋ ಆಗ ದೇಶದ ಸಂಪತ್ತು ಹೋಗುತ್ತದೆಂಬ ಒಂದು ದೊಡ್ಡ ದೃಷ್ಟಿಯಿಂದ ಇಂಥ ಅನ್ಯಾಯವನ್ನು ತಡೆಗಟ್ಟಲು ಒಂದು ಕಾನೂನನ್ನು ತಂದರು, ಅದರಲ್ಲಿ ಬರೀ ಇನಾಂದಾರರಿಗೆ ಮಾತ್ರ ನಿರ್ಬಂಧ ಮಾಡಿಲ್ಲ; ಚೆನೆಂಟುಗಳಿಗೂ ಕೂಡ ನಿರ್ಬಂಧವಿದೆ. ಅವರು ಸರಿಯಾಗಿ ಕಂದಾಯಕೊಡದೇ ಹೋದರೆ ಹಕ್ಕು ದಾರಿ ಬರುವುದಿಲ್ಲ, ಇನಾಂದಾರರಿಗೂ ಅನುಕೂಲವಾಗುತ್ತದೆ. ಚೆನೆಂಟ್ ಕಂದಾಯಕೊಡದಿದ್ದರೆ ಈ ಆಕ್ಟ್ ಅನ್ವಯಿಸುವುದಿಲ್ಲ. ಶ್ರೀ ಎಲ್. ಸಿದ್ದಪ್ಪನವರು ಇನಾಂಗ್ರಾಮದ ಪರಿಸ್ಥಿತಿಯನ್ನು ದೂರಾಲೋಚನೆ ಮಾಡಬೇಕು. ರೈತವಾರಿ ಪದ್ಧತಿಯಲ್ಲಿ ಕೈಕೆಳಗೆ ಕಸಬು, ಕೃಷಿ ಮಾಡುವವರು ಒಂದು ಲೀಸ್ ತೆಗೆದು ಕೊಂಡು ಒಂದು ಒಪ್ಪಂದಮಾಡಿ ಕೊಂಡಿರುತ್ತಾರೆ. ಅದೇ ಇನಾಂದಾರರಲ್ಲಿ ಹಾಗಲ್ಲ. ಮಕ್ಕಳು, ಮೊಮ್ಮಕ್ಕಳು, ಅಜ್ಜ ಎಲ್ಲಾ ಇನಾಂದಾರರ ಕೈಕೆಳಗಿರುತ್ತಾರೆ. They are very helpless. ಇನಾಂದಾರರ ಕೈಕೆಳಗೆ ರೈತರಿಗೆ ಏನು ತೊಂದರೆಯೆಂದು ಕೇಳಬಹುದು. ಕ್ರಮವಾದ ಲೆಕ್ಕಪತ್ರಗಳನ್ನಿಟ್ಟಿರುವ ಇನಾಂದಾರರು ಬಹು ಕಡಿಮೆ, ಆ ಗ್ರಾಮಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಕೂಡ ಆಗಿಲ್ಲ; ಜಮೀನಿನ ಚೆಕ್ಕುಬಂದಿ ಇರುವುದಿಲ್ಲ. 150 ವರ್ಷಗಳಿಂದ ನುಮ್ಮನ್ನೆ ಅನುಭವಿಸಿಕೊಂಡು ಬಂದಿರುವವರನ್ನೂ ಕೂಡ ಹೊರಡಬೇಕೆಂದು ಒತ್ತಾಯ ಪಡಿಸಿದಂತಹ ಕೆಲವು ಕೇಸುಗಳನ್ನು ಹಾಸನ ಜಿಲ್ಲೆಯಲ್ಲಿ ರಾಯ್ಟರಾಗಿ ನಾನೇ ನಡೆಸಿದ್ದೇನೆ. ಇನಾಂದಾರರ ರೈತರಿಗೂ ರೈತರ

ಕೈಕೆಳಗಿರುವ ಗುತ್ತಿಗೆದಾರರಿಗೂ ಬಹಳ ವ್ಯತ್ಯಾಸವಿದೆ. ಅದನ್ನು ತಿಳಿದುಕೊಳ್ಳಬೇಕು. ಅವರ ಸ್ಥಾನಮಾನಗಳು ಬಹಳ ಅಧೋಗತಿಯಲ್ಲಿವೆ. ಆದ್ದರಿಂದ ಅವರಿಗೆ ರಕ್ಷಣೆಬೇಕು. ಅವರ ಹಕ್ಕುಬಾಧ್ಯತೆಗಳನ್ನು ಸಾಧಿಸಿಕೊಡುವುದಕ್ಕೆ ತಕ್ಕ ರುಜುವಾತು ಬೇಕು. ರಾಯರು ಕೆಲಸಮಾಡಿರುವವನಿಗೆ ಇದು ಚೆನ್ನಾಗಿ ಗೊತ್ತು. ಇನಾಂದಾರರಿಂದ ತೊಂದರೆಯಾಗುವುದನ್ನು ತಪ್ಪಿಸುವುದಕ್ಕಾಗಿ ತಂದೆಯೇ ಹೊರತು ಪೂರ್ಣವಾಗಿ ಇನ್ನೂ ಏನೂಮಾಡಿಲ್ಲ. ರೈತವಾರಿ ಪದ್ಧತಿಗೂ, ಇನಾಂದಾರಿಗಳಿಗೂ ವ್ಯತ್ಯಾಸವಿದೆ. ಚೆನೆನ್ನಿ ಲೆಜಿಸ್ಲೇಚರ್ ಮಾಡಬೇಕೆಂದು ನಮ್ಮ ವರದಿಯಲ್ಲಿ ಶಿಫಾರ್ಸು ಮಾಡಿದ್ದೇವೆ. ಅದನ್ನು ಸರ್ಕಾರದವರು ಮಾಡೇ ಮಾಡುತ್ತಾರೆ. ರೈತವಾರಿ ಪ್ರಕಾರ ಶ್ರೀ ಎಲ್. ಸಿದ್ದಪ್ಪನವರಿಗೆ 50 ಎಕರ ಜಮೀನಿದ್ದರೆ ಅದಕ್ಕೆ ರಿಜಿಸ್ಟರ್ಡ್ ಪತ್ರವಿರುತ್ತದೆ. ಚೆನೆಂಟ್‌ಗೆ ಒಪ್ಪಂದ ವಿರುತ್ತದೆ. ಅದೇ ಇನಾಂತಿ ಇರುವ ಕಡೆಹಾಗಿಲ್ಲ.

Sri L. SIDDAPPA.—You appoint a Commission to investigate the matter.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗಲೂ ಕೂಡ ಇನಾಂದಾರರ ಕೈಕೆಳಗಿರುವ ರೈತರಿಗೆ ಎಷ್ಟು ವರ್ಷದಿಂದ ಚೆನೆನ್ನಿ ಇದೆ, ಎಷ್ಟು ವರ್ಷ ಆಲ್ಲಿ ವಾಸವಾಗಿದ್ದಾರೆ ಎಂದು ನೋಡಿ ಆರು ವರ್ಷದ ಪರಿಮಿತಿಯನ್ನು ಗೊತ್ತುಮಾಡಿ ಹಾಗಿದ್ದರೆ ಅಲ್ಲಿ ಜಮೀನ್ದಾರರು ಯಾರೋ ಅವರು ಅಂಥವರಿಗೆ ಹಕ್ಕನ್ನುಕೊಡಬೇಕೆಂದು ಹೇಳಿದೆ. ಆರ್ಬಿಟ್ರೆರಿಯಾಗಿ ಯಾವುದನ್ನೂ ಪ್ರಪೋಸ್‌ಮಾಡಿಲ್ಲ. ಯಾರಿಗೂ ಅನಾನುಕೂಲವಾಗದಂತೆಯೂ, ರೈತರಿಗೆ ತೊಂದರೆಯಾಗದ ಹಾಗೂ ಮಾಡಿದೆ. ಹಿಂದೆ ಅಸೆಂಬ್ಲಿಯಲ್ಲೇ ಜರೂರಾತಿ ಆಕ್ಟು ಬಂದಿತ್ತು. ಅವಕ್ಕೂ ಇದಕ್ಕೂ ಎಷ್ಟೋವ್ಯತ್ಯಾಸವಿದೆ. ನಾವು ಸೆಲೆಕ್ಟ್ ಸಮಿತಿಗಿಂತ ಹೆಚ್ಚಾಗಿ ಗಮನಕೊಟ್ಟು ಇಂಥ ಕೆಲವು ಮುಖ್ಯ ವಿಚಾರಗಳನ್ನು ಒಂದು ಒಂದೂವರೆ ದಿವಸದವರೆಗೂ ಕೂಲಂಕಷವಾಗಿ ಪರಿಶೀಲಿಸಿ ಇತ್ಯರ್ಥಮಾಡಿದ್ದೇವೆ. ಅದನ್ನು ಅನುಸರಿಸಿ ಈ ಬಿಲ್ಲು ಬಂದಿರುತ್ತೆ. ಸರ್ಕಾರದವರು ಈ ಬಿಲ್ಲಿನ ವಿಚಾರದಲ್ಲಿ ಸಮಿತಿಯವರಿಗೇನೂ ತಿಳಿಸಲಿಲ್ಲ. ಎಮರ್ಜೆನ್ಸಿ ಆಕ್ಟ್‌ಮಾಡಿದುದು ಪ್ರಜಾಪ್ರತಿನಿಧಿ ಸಭೆಯ ಕಾರ್ಯಕ್ರಮದ ಪಟ್ಟಿಯಲ್ಲಿತ್ತು. ಅದನ್ನು ನೋಡಿ ನಾವು ಪರಿಶೀಲನೆಮಾಡಿ ಅದನ್ನು ಇನ್ನೂ ಸ್ವಲ್ಪ ತಿದ್ದುಪಡಿ ಮಾಡಿ ಉತ್ತಮಗೊಳಿಸಿ ಸರ್ಕಾರದವರಿಗೆಕಳುಹಿಸಿದೆವು. ಅದನ್ನು ಸರ್ಕಾರದವರು ವಿಶ್ವಾಸವಿಂದಒಪ್ಪಿಕೊಂಡರು. ಸಧ್ಯದಲ್ಲಿ ಇಂತಹ ಒಂದು ಕಾನೂನು ಅವಶ್ಯಕ, ಇದು ಬಹಳ ಸಮರ್ಪಕವಾಗಿದೆ, ಇದನ್ನು ಅಂಗೀಕರಿಸಬಹುದೆಂದು ನಾನು ಸೂಚಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ಈ ಕಾನೂನು ಅತ್ಯಾವಶ್ಯಕ ಮತ್ತು ಜರೂರು ಆಗಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ ಈ ಕಾನೂನನ್ನುಮಾಡದೇ ಹೋದ ಪಕ್ಷದಲ್ಲಿ ಅನೇಕ ಜನರಿಗೆ ಹೆಚ್ಚಿನ ತೊಂದರೆಯಾಗುತ್ತದೆ. ಅದನ್ನು ತಪ್ಪಿಸುವುದಕ್ಕೆಈ ಕಾನೂನು ಜಾರಿಮಾಡಬೇಕೆಂದು ಭೂಕಂದಾಯ ವಿಮರ್ಶಕ ಸಮಿತಿಯವರು ಶಿಫಾರಸುಮಾಡಿದ ಪರಿಣಾಮವಾಗಿ ಅವಸರದ ಕಾನೂನು ಜಾರಿಗೆ ಬಂತು. ಇಂತಹ ಕಾನೂನಿನಿಂದ ನಮ್ಮ ಹಕ್ಕುಬಾಧ್ಯತೆಗೆ ಸ್ವಲ್ಪ ಮಟ್ಟಿಗೆ ಧಕ್ಕೆ ಬರುತ್ತದೆ ಎಂದು ಸಮಿತಿಯಲ್ಲಿ ಪ್ರತಿಪಾದಿಸಿದವನು ನಾನು; ನಮ್ಮ ಇಚ್ಛಾನುಸಾರ ನಮ್ಮ ಆಸ್ತಿ ಪಾಸ್ತಿಗಳನ್ನು ವಿಲೇವಾರಿಮಾಡುವುದಕ್ಕೆ ಇಂತಹ ಕಾನೂನುಗಳಿಂದ ಪ್ರತಿಬಂಧಕವಾಗುತ್ತದೆ ಎಂದು ವಾದಮಾಡಿದವರಲ್ಲಿ ನಾನೊಬ್ಬ. ಆದರೆ ಇದರಿಂದ ಒಳ್ಳೆಯದೆಷ್ಟು, ಕೆಟ್ಟ ದ್ದೆಷ್ಟು ಎಂಬುದನ್ನು ತೂಕಮಾಡಿ ನೋಡಿ ಇದರಿಂದ ಹೆಚ್ಚು ಅನುಕೂಲವಾಗುತ್ತದೆ ಎಂದು ಕಂಡು ಬಂದ ಮೇಲೆ ಇದಕ್ಕೆ ಒಪಿಗೆ ಕೊಟ್ಟಿದ್ದೇನೆ. ಹೆಚ್ಚು ಜನರಿಗೆ ಅನುಕೂಲವಾದರೆ ನಾವು ಒಪ್ಪಿಕೊಳ್ಳುವುದರಲ್ಲಿ ಅಭ್ಯಂತರವಿಲ್ಲ. Maximum good to the maximum number of people ಎಂಬ ಮೂಲ ತತ್ವ ದೃಷ್ಟಿಯಿಂದ ಇದನ್ನು ನಾವು ಗಮನದಲ್ಲಿಡಬೇಕು. ಈ ಕಾನೂನು ತರಲು ಮೂಲಕಾರಣವೇನೆಂದರೆ, ಭೂ ಕಂದಾಯ ಪರಿಶೀಲನಾ ಸಮಿತಿಯವರು ಇನಾಂ ಗ್ರಾಮಗಳನ್ನು ಸರ್ಕಾರ ವಹಿಸಿಕೊಳ್ಳುವಂತೆ ಸಲಹೆ ಮಾಡಲು ತೀರ್ಮಾನ ತಕ್ಷಣವೇ ದುರುದ್ದೇಶದಿಂದ ಕೂಡಿದ ಕೆಲವು ಇನಾಂದಾರರು ಕೇವಲ ಬಡವರಾದ ರೈತರಿಗೆ ತೊಂದರೆ ಕೊಡಲು ಪ್ರಾರಂಭಿಸಿದರು. ತಮ್ಮ ಇನಾಂ ಗ್ರಾಮಗಳನ್ನು ಸರ್ಕಾರದವರು ತೆಗೆದುಕೊಂಡು ಬಿಡುತ್ತಾರೆಂದು ಊಹೆಮಾಡಿಕೊಂಡು ಬಡ ಹಿಡುವಳಿದಾರರಿಗೆ ಇರುವ ಅಜ್ಞಾನ ಮತ್ತು ಅನಕ್ಷರತೆಗಳನ್ನು ದುರುಪ ಯೋಗಪಡಿಸಿಕೊಳ್ಳುತ್ತಿದ್ದಾರೆಂಬುದು ತಿಳಿಯಬಂದಿತು. ಕೆಲವು ಸಂದರ್ಭಗಳಲ್ಲಿ ಇನಾಂದಾರರಿಗೆ ರೈತರೂ ತೊಂದರೆಕೊಡುತ್ತಿದ್ದಾರೆಂಬುದು ಕೂಡ ಸಮಿತಿಯ ಗಮನಕ್ಕೆ ಬಂತು. ಇಂಥ ಸಂದರ್ಭಗಳು ಬಹಳ ಕಡಿಮೆ ಎಂಬುದು ಪರಿಶೀಲನೆ ಮಾಡಿದ ಮೇಲೆ ಗೊತ್ತಾಯಿತು. ಸಂಪೂರ್ಣ ವಿಮರ್ಶೆಯಿಂದ ಇನಾಂ ಗ್ರಾಮಗಳ ರೈತರಿಗೆ ರಕ್ಷಣೆ ಕೊಡಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಲಾಯಿತು.

ಶ್ಯಾನುಭೋಗ ಪಟೇಲರುಗಳ ವಿಷಯದಲ್ಲಿಯೂ ಇನಾಂ ಗ್ರಾಮಗಳ ವಿಷಯದಲ್ಲಿಯೂ ಪ್ರಜಾ ಪ್ರತಿನಿಧಿಗಳು ಮೊದಲಿನಿಂದಲೂ ಸುಧಾರಣೆಮಾಡಬೇಕೆಂದು ಹೇಳುತ್ತಲೇ ಇದ್ದರು. 1935ನೆಯ ಇಸವಿ ಯಲ್ಲಿ ಶ್ಯಾನುಭೋಗ ಪಟೇಲರ ವಿಷಯದಲ್ಲಿ ಒಂದು ಸುಧಾರಣಾಪ್ರಯತ್ನವಾಯಿತು. ಇನಾಂ ಗ್ರಾಮಗಳ ವಿಷಯದಲ್ಲಿ 1916ನೆಯ ಇಸವಿಯಿಂದ ಬಹು ಜನ ಪ್ರಜಾಪ್ರತಿನಿಧಿಗಳು ವಿಶೇಷ ಒತ್ತಾಯ ಪಡಿಸಿದರು. ಸರ್ಕಾರದವರು ಇದು ಬಹಳ ತೊಡಕಾದ ವಿಚಾರವಾದ್ದರಿಂದಲೂ, ಕೆಲವು ಮೂಲಭೂತವಾದ ತತ್ವಗಳನ್ನೇ ಬದಲಾಯಿಸಬೇಕಾಗುತ್ತ ಹಸಂಭದ ವಿದ್ದದರಿಂದ ಹೆದರಿ ಈ ವಿಚಾರವನ್ನು cold storage ನಲ್ಲಿಟ್ಟರು. ಶ್ರೀ ಸಿದ್ದಪ್ಪನವರು ಮಂತ್ರಿಗಳಾಗಿದ್ದಾಗಲಾದರೂ ಈ ಕಾನೂನು ಜಾರಿಗೆ ಬರಬಹುದೆಂದು ಯೋಚಿಸಿದ್ದೆವು, ಅವರು ಏನೂಮಾಡಲಲ್ಲ. ಇದನ್ನು ಜಾರಿಗೆ ತರತಕ್ಕ ಧೈರ್ಯವನ್ನು ಅವರೂ ಸಹ ಕೂಡ ಮಾಡಲಲ್ಲ.

Sri L. SIDDAPPA.—Please refer to Mr. Pulla Reddi's reply in this connection.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—Yes, I moved a resolution on the subject to which an answer was given that when conditions become favourable this would be considered". This was the answer. Such stock answers we used to have in any number.

ಬೇರೆ ಒಂದು ವಿಷಯದ ಚರ್ಚೆಕಾಲದಲ್ಲಿ ಈ ಸರ್ಕಾರ ಹಿಂದಿನ ಸರ್ಕಾರದ ನೀತಿಯನ್ನೇಕೆ ಅನುಸರಿಸಲಿಲ್ಲವೆಂದು ಕೇಳಿದರು. ತಾವು ಸರ್ಕಾರದಲ್ಲಿದ್ದಾಗ

ಇಂತಹ ಉಪಯುಕ್ತವಾದ ಭೂಕಂದಾಯ ಪರಿಶೀಲನಾ ಸಮಿತಿಯನ್ನು ರಚನೆಮಾಡುವ ಕಾರ್ಯಕ್ರಮಕ್ಕೆ ಏಕೆ ಕೈಹಾಕಲಿಲ್ಲವೆಂದು ಅವರನ್ನು ನಾನು ಕೇಳುತ್ತೇನೆ. ಶ್ರೀ ಸಿದ್ದಪ್ಪನವರು ಮತ್ತೊಂದು ಆಕ್ಷೇಪಣೆ, ಇಂತಹ ಒಂದು ಸಣ್ಣಮಸೂದೆಯನ್ನೇಕೆ ತರಬೇಕು, ಒಂದೇ ಸಾರಿ ಆ ಸಮಿತಿಯ ಸಲಹೆಗಳನ್ನೆಲ್ಲಾ ಪರಿಶೀಲಿಸಿ ಪರಿಪೂರ್ಣವಾದ ಒಂದು ಮಸೂದೆಯನ್ನೇಕೆ ಸರ್ಕಾರದವರು ತರಬಾರದೆಂದು ಕೇಳಿದರು. ಅಂತಹ ಒಂದು ಪೂರ್ಣವಾದ ಮಸೂದೆಯನ್ನು ತಯಾರುಮಾಡಬೇಕಾದರೆ ಸ್ವಲ್ಪ ಹೆಚ್ಚು ಕಾಲಾವಕಾಶ ಬೇಕಾಗುತ್ತದೆ. ಎಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಸರ್ಕಾರದವರು ಸಂಪೂರ್ಣವಾದ ಕಾನೂನನ್ನು ಜಾರಿಗೆ ತರುವ ಹೊತ್ತಿಗೆ ಏನು ಅನಾಹುತವಾಗುತ್ತದೆಂಬುದನ್ನು ಗಮನಿಸಬೇಕು. ಈ ರೀತಿ ಒಂದು ಕಾನೂನು ಜಾರಿಗೆ ಬರುತ್ತದೆಂಬುದನ್ನರಿತು ಈ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳಲು ಕೆಟ್ಟ ಜನರಿಗೆ ಅವಕಾಶವಾಗುತ್ತದೆ. ಇದರಿಂದ ಎಷ್ಟೋ ಜನರಿಗೆ ತೊಂದರೆಯಾಗುತ್ತದೆ. ಈಗ ಈ ಮಸೂದೆಯಲ್ಲಿರುವುದಾದರೂ ಏನು ? ಇನಾಮ್ ಗ್ರಾಮಗಳಲ್ಲಿ ಜಮೀನನ್ನು ಇನಾಮ್‌ದಾರರು ಪರಭಾರೆಮಾಡುವುದನ್ನು ತಪ್ಪಿಸಲು ಪ್ರತಿಬಂಧಕಹಾಕಿದ್ದಾರೆ. ಅವರಿಂದ ಜಮೀನುಗಳನ್ನೇನೂ ಕಿತ್ತುಕೊಳ್ಳುತ್ತಿಲ್ಲ. ಇನಾಮ್ ಜಮೀನುಗಳಲ್ಲಿರುವ ಮರ ವಗೈರೆಗಳನ್ನು ಪರಭಾರೆ ಮಾಡಬಾರದೆಂದು ಇದರಲ್ಲಿ ವಿಧಾಯಕ ಮಾಡಿದೆ. ಒಂದುವೇಳೆ ಅನಿವಾರ್ಯವಾಗಿ ಅಲ್ಲಿನ ಮರಗಳನ್ನು ಉಪಯೋಗಿಸಬೇಕಾಗಿ ಬಂದರೆ, ಅದಕ್ಕೆ ಸರಿಯಾದ ಕಾರಣವಿದ್ದರೆ, ಡೆಪ್ಯುಟಿಕಮಿಷನರಿಗೆ ತಿಳಿಸಿ ಅಪ್ಪಣೆಪಡೆದು ಉಪಯೋಗಮಾಡಿಕೊಳ್ಳಬಹುದೆಂದು ವಿಧಾಯಕಮಾಡಿದೆ. ಇದೇನೂ ಕೆಟ್ಟದ್ದಲ್ಲ. ಎಲ್ಲಾ ಕಾನೂನುಗಳಿಂದಲೂ ಸಂದರ್ಭಾನುಸಾರ ಕೆಲವರಿಗೆ ತೊಂದರೆಯಾಗಬಹುದು, ಬಹಳ ಒಳ್ಳೆಯ ಕಾನೂನುಗಳೆಂದು ನಾವು ಯಾವುದನ್ನು ಹೇಳುತ್ತೇವೊ ಅವುಗಳಿಂದ ಕೂಡ ಕೆಲವುವೇಳೆ, ಸ್ವಲ್ಪ ಜನರಿಗೆ ತೊಂದರೆಯಾಗಬಹುದು. ಕಳ್ಳತನ ಮಾಡುವವರಿಗೆ ಶಿಕ್ಷೆ ಮಾಡಬೇಕೆಂದು ಕಾನೂನಿದೆ. ಇದರಿಂದ ಕಳ್ಳರಿಗೆ ತೊಂದರೆಯಾಗಬಹುದಲ್ಲವೆ ? ಭಾರತ ರಾಜ್ಯಾಂಗದಲ್ಲಿ ಕೊಟ್ಟಿರುವ ಮೂಲಹಕ್ಕುಗೆ ಧಕ್ಕೆಬರುತ್ತದೆಂದು ಹೇಳುವುದರಲ್ಲಿ ಅರ್ಥವಿಲ್ಲ. ರಾಜ್ಯಾಂಗದ ವಿಧಿಯನ್ನು ಓದಿ ಸರಿಯಾಗಿ ಅರ್ಥಮಾಡಿಕೊಂಡರೆ ಅನುಮಾನ ಪರಿಹಾರವಾಗುತ್ತದೆ. ಅದರಲ್ಲಿ every citizen has a fundamental right to hold, to acquire and to dispose of property ಎಂದಿದೆ. ಇದಕ್ಕೆ ಈ ಕಾನೂನಿನಿಂದ ಯಾವ ಧಕ್ಕೆಯೂ ಬರುವುದಿಲ್ಲ. ಈ ಕಾನೂನಿನಲ್ಲಿ ಕೆಲವು ಕಾಲ ಕೆಲವು ಭೂಮಿಕಾರ್ಣಗಳು ಇದ್ದಂತೆ ಇರಲಿ ಎಂದು ಮಾಡಿದ್ದಾರೆ. ಅದು ಕೆಲವು ಕಾಲದವರೆಗೆ ಮಾತ್ರ. ಒಂದುವೇಳೆ ಅನಿವಾರ್ಯವಾಗಿ ಆಗಬೇಕಾದರೆ, ಡೆಪ್ಯುಟಿಕಮಿಷನರಿಗೆ ಬರದು ವಿಲೇ ಮಾಡಿಕೊಳ್ಳಬಹುದು. Why was not the Committee given powers to go into the question of other big holders of lands and the tenants given protection ಎಂದು ಕೆಲವರು ಹೇಳಿದರು. ಈಗ ಇನಾಮ್ ಗ್ರಾಮಗಳಲ್ಲಿ ಇನಾಮ್‌ದಾರರು ಹೆಚ್ಚು ಜಮೀನನ್ನಿಟ್ಟುಕೊಳ್ಳುವುದಕ್ಕೂ ಸರ್ಕಾರಿ ಗ್ರಾಮದ ರೈತರು ಇಟ್ಟುಕೊಳ್ಳುವುದಕ್ಕೂ ವ್ಯತ್ಯಾಸವಿದೆ. ಇನಾಮ್ ಗ್ರಾಮಗಳಲ್ಲಿ ಏಕೆ ಇದನ್ನು ಜಾರಿಗೆ ತರಬೇಕಾಯಿತೆಂದರೆ, ಇನಾಮ್ ದಾರರಿಗೂ ರೈತರಿಗೂ ಇರುವ ಸಂಬಂಧ ಸರಿಯಾಗಿಲ್ಲ. ಇದು ಜನಜನಿತವಾದುದು.

Sri L. SIDDAPPA,—I have already stated regarding the merits about which I have my own views, and that I will express them when a consolidated Bill comes before the House.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಎಲ್ಲ ವಿಷಯಗಳನ್ನೂ ಒಳಗೊಂಡ ಒಂದು ಮಸೂದೆಯನ್ನು ತರಬೇಕಾದರೆ ಕಾಲಾವಕಾಶ ಬೇಕೆಂಬುದನ್ನು ಅವರೇ ಒಪ್ಪಿಕೊಂಡಹಾಗಾಯಿತು. ಅಂತಹ ಒಂದು ಮಸೂದೆಯನ್ನು ತಯಾರಿಸುವುದು ಅಷ್ಟು ಸುಲಭವಾದ ಕೆಲಸವೂ ಅಲ್ಲ. ಅದು ಅನೇಕ ಕ್ಲಿಷ್ಟ ವಿಚಾರಗಳನ್ನೊಳಗೊಂಡಿದೆ. ಭೂಕಂದಾಯ ಪದ್ಧತಿ ಇಂದಿನ ಪರಿಸ್ಥಿತಿಗೆ ಹೊಂದುವಂತೆ ಪಾರ್ಪಾಡುಮಾಡಬೇಕಾದರೆ, ಅದನ್ನು ಬಹಳ ಎಚ್ಚರಿಕೆಯಿಂದಲೂ ಜವಾಬ್ದಾರಿಯಿಂದಲೂ ಮಾಡಬೇಕು. ಆದಕಾರಣ ಕಾಲಾವಕಾಶಬೇಕು. ಮತ್ತು ಈ ಕಾನೂನನ್ನು ರೀತಿ ಅಲ್ಪಸ್ವಲ್ಪವಾಗಿ ಬಿಡಿಬಿಡಿಯಾಗಿ ತರುವುದಕ್ಕೆ ಅವಕಾಶವಿಲ್ಲ. ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಆದ್ದರಿಂದ ಈಗ ಈ ಕಾನೂನಿನಲ್ಲಿ ಅಡಕವಾಗಿರತಕ್ಕ ಅಂಶಗಳಿಗೂ ರಾಜ್ಯಾಂಗದಲ್ಲಿ ಕೊಟ್ಟಿರತಕ್ಕ ರಕ್ಷಣೆಗೂ ಅಂಥಾ ವಿರೋಧವೇನೂ ಇರುವುದಿಲ್ಲ. ಅದಕ್ಕನುಸಾರವಾಗಿಯೂ ಮತ್ತು ವ್ಯಾಪ್ತಿಗೆ ಒಳಪಟ್ಟೂ ಸಹ ಇದೆ. ಇದರಿಂದ ದೇಶಕ್ಕೆ ಅದರಲ್ಲೂ ಬಡವರಿಗೆ, ಅನಕ್ಷರಸ್ಥರಿಗೆ ಹೆಚ್ಚು ಅನುಕೂಲವಾಗುತ್ತದೆಯೇ ಹೊರತ ಮತ್ತೆ ಬೇರೆ ಇಲ್ಲ. ಇದರಿಂದಾಗತಕ್ಕ ಒಳ್ಳೆಯದನ್ನು ಒಂದು ಕಡೆ, ತೊಂದರೆಗಳನ್ನು ಮತ್ತೊಂದುಕಡೆ ತೂಕ ಹಾಕಿ ನೋಡುವುದಾದರೆ ಒಳ್ಳೆಯದೇ ಬಹಳವಾಗುವುದರಿಂದ ಯಾವ ಭಿನ್ನಾಭಿಪ್ರಾಯವೂ ಇಲ್ಲದೆ ಈ ಮಸೂದೆಯನ್ನು ಸಭೆಯವರು ಅಂಗೀಕರಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

*ಶ್ರೀ ಟಿ. ಸುಬ್ರಹ್ಮಣ್ಯರವರು (ತುಮಕೂರು ಜಿಲ್ಲೆ).—ಈ ಮಸೂದೆಯನ್ನು ಪುಷ್ಟೀಕರಿಸುತ್ತಾ ಮೂಲಭೂತ ಹಕ್ಕುಗಳಿಗೆ ಇದು ವಿರೋಧ ಬರುವುದಿಲ್ಲ ಎಂಬುದನ್ನು ಮಾತ್ರ ನಾನು ಈ ಸಭೆಗೆ ತಿಳಿಸಬೇಕೆಂದಿದ್ದೇನೆ. 1949ನೇ ಇಸವಿ ಡಿಸೆಂಬರ್‌ನಲ್ಲಿ ಹೊರಡಿಸಿದ ಎಮರ್ಜೆನ್ಸಿ ಆರ್ಡರ್ಸ್ ಆಗಲೀ ಅಥವಾ ಜೂನ್‌ನಲ್ಲಿ ಹೊರಡಿಸಿದ ಎಮರ್ಜೆನ್ಸಿ ಆರ್ಡಿನೆನ್ಸ್ ಆಗಲೀ ತೆಗೆದುಕೊಂಡು ನಾವು ಇವತ್ತು ಅವರ ನ್ಯಾಯಾನ್ಯಾಯಗಳನ್ನು ವಿಮರ್ಶೆ ಮಾಡುತ್ತಾ ಇಲ್ಲ. ಇವತ್ತು ಬಂದಿರತಕ್ಕ ಮಸೂದೆ ಕಾನೂನು ಒದ್ದಾಗಿದೆಯೇ ಅಥವಾ ಭರತಖಂಡದ ರಾಜ್ಯ ವ್ಯವಸ್ಥಾ ಕಾನೂನು ಏನಿದೆಯೋ ಅದಕ್ಕೆ ವಿರೋಧವಾಗಿದೆಯೇ ಎಂಬುದನ್ನು ಸ್ವಲ್ಪ ಸ್ವಲ್ಪ ಮಾಡಬೇಕೆಂದಿದ್ದೇನೆ. ಶ್ರೀ. ಸಿದ್ಧಪ್ಪನವರು 19ನೇ ಸೆಕ್ಷನ್ ಓದಿದರು. 19ನೇ ಸೆಕ್ಷನ್ 5ನೇ ಕ್ಲಾಸನ್ನು ಪೂರ್ತಿಯಾಗಿ ಓದಬೇಕಾಗಿತ್ತು, ಏಕೆಂದರೆ ಕಾನೂನು ಭಾಗವಾದದ್ದರಿಂದ ಸರ್ವರೂ ತಿಳಿದುಕೊಳ್ಳಲು ಹೇಳಬೇಕಾದ್ದು ಕರ್ತವ್ಯ ಎಂದು ಹೇಳಿ ಅದನ್ನು ತಿಳಿಸುತ್ತಾ ಇದ್ದೇನೆ. ಅದು ಏನು ಹೇಳುತ್ತದೆ ಎಂದರೆ.—

"Article 19(5).—Nothing in sub-clauses (d), (e) (f) of the said clause shall affect the operation of any existing law in so far as it imposes or prevent the State from making any law imposing, reasonable restrictions on the exercise of any of the rights conferred by the

said sub-clauses either in the interests of the general public or for the protection of the interests of any scheduled tribe."

ಯಾವುದಾದರೂ ಒಂದು ಅಧಿಕಾರವನ್ನು ಚಲಾಯಿಸುವಾಗ ಅವರಿಗೆ ಪೂರ್ಣ ಅಧಿಕಾರ ಇರಬೇಕಾಗುತ್ತದೆ. ಆದರೆ ಆ ಅಧಿಕಾರ ಚಲಾವಣೆಯು ಕಾಲದಲ್ಲಿ ಸಾಮಾನ್ಯ ಜನಗಳ ಹಿತರಕ್ಷಣೆಗೆ ಸ್ವಲ್ಪಮಟ್ಟಿಗೆ ತೊಂದರೆಗಳನ್ನು ತಂದೊಡ್ಡಬಹುದು. ಆ ಒಂದು ನಿಯಮ ಇದರಲ್ಲಿ ಇದೆ. ಏಕೆಂದರೆ ಇವತ್ತು ನಮ್ಮ ಮಾನ್ಯ ಸ್ನೇಹಿತರು ಜೋಡಿದಾರರಿಗೂ ಮತ್ತು ರೈತರಿಗೂ ಸ್ವಲ್ಪ ಘರ್ಷಣೆ ಅನೇಕ ಕಡೆಗಳಲ್ಲಿ ಇದೆ ಎಂದು ಹೇಳಿದರು. ಕೆಲವು ಕಡೆಗಳಲ್ಲಿ ಇಲ್ಲದೇ ಇರಬಹುದು. ಅನೇಕ ಕಡೆಗಳಲ್ಲಿ ಇದೆ. ಇವತ್ತು ತಂದಿರತಕ್ಕ ಮಸೂದೆ ಅವರವರ ಮಧ್ಯೆ ಇರತಕ್ಕ Civil rights ಗೆ ಏನೂ ತೊಂದರೆಮಾಡುವುದಿಲ್ಲ. ಅವರ Civil rights ಏನು ಎಂಬುದನ್ನು ನಿರ್ಧರಮಾಡತಕ್ಕ ಕೆಲಸಕ್ಕೆ ಈ ಮಸೂದೆ ಕೈಹಾಕುವುದಿಲ್ಲ. ಅದು ಬೇರೆ ವಿಧಾನದಲ್ಲಿ ಆಗಬೇಕು. ಒಂದು ಹೊಸ ಕಾನೂನು ಬರಬಹುದೆಂದು ನಿರೀಕ್ಷಣೆ ಮಾಡಿಕೊಂಡು ಜೋಡೀದಾರರಾಗಲೀ, ರೈತರಾಗಲೀ ತಮ್ಮ ತಮ್ಮ ಹಕ್ಕನ್ನು ತಾವುತಾವೇ ಚಲಾಯಿಸಿ ವಿಪರೀತ ಪರಿಸ್ಥಿತಿಯುಂಟಾಗಬಹುದು ಎಂಬ ಸಂಶಯದಿಂದ ರೈತರಿಗೂ, ಜೋಡೀದಾರರಿಗೂ ಮತ್ತು ಇನಾಂದಾರರಿಗೂ ಒಂದು ವಿಧವಾದ ರಕ್ಷಣೆ ಇರಲಿ, ಅವರವರಲ್ಲಿ ಘರ್ಷಣೆ ಆಗಕೂಡದು ಎಂಬ ಉದ್ದೇಶದಿಂದ ಈ ಮಸೂದೆಯನ್ನು ಸರ್ಕಾರದವರು ನಮ್ಮ ಮುಂದಿಟ್ಟಿದ್ದಾರೆ. ಇದರಿಂದ ಅನೇಕ ವಿಧವಾದ ತೊಂದರೆಗಳಾಗಬಹುದೆಂದು ಮಾನ್ಯ ಸದಸ್ಯರು ಹೇಳಿದರು. ತೊಂದರೆ ಕೆಲವು ಕಡೆ ಆಗಬಹುದು. ಶ್ರೀ ಹುಚ್ಚೇಗೌಡರು ಭಾಷಣ ಮಾಡುತ್ತಾ ಮನೆಗೆ ಸೌದೆ ತೆಗೆದುಕೊಳ್ಳಬೇಕಾದರೂ ಡೆಪ್ಯುಟಿಕಮಿಷನರವರ ಅನುಮತಿ ತೆಗೆದುಕೊಳ್ಳಬೇಕಾಗುತ್ತದೆ, ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸಿಗೆ ಬರಬೇಕು ಅದರಿಂದ ಬಹಳ ತೊಂದರೆ ಎಂದು ಹೇಳಿದರು. ನಿಜ. ಆದರೆ ಸಾಮಾನ್ಯವಾಗಿ ನಿತ್ಯ ಜೀವನದಲ್ಲಿ ಜರುಗುವ ಕಾರ್ಯಗಳಲ್ಲಿ ರೈತನಾಗಲೀ, ಜೋಡೀದಾರನಾಗಲೀ ಕೈಹಾಕಿದರೆ, ಆ ಕಾರ್ಯಗಳಲ್ಲಿ ಅಡಚಣೆ ಬಾರದಂತೆ ನೋಡಿಕೊಳ್ಳಲು ಯಾವ ಅಧಿಕಾರ ಅವಶ್ಯಕವೋ ಆ ಅಧಿಕಾರವನ್ನು ಸರ್ಕಾರದವರು ತಮ್ಮ ಕೈಯ್ಯಲ್ಲಿಟ್ಟುಕೊಂಡಿದ್ದಾರೆ. The State may by notification in the *Mysore Gazette* make rules to carry out the purposes of this Act.

ಈ ಆಕ್ಟಿನ ಉದ್ದೇಶವೇನೆಂದರೆ ಈಗಿರತಕ್ಕ ಪರಿಸ್ಥಿತಿಯನ್ನು ಇದ್ದಕ್ಕೆ ಇದ್ದಹಾಗೆಯೇ ಇರುವಂತೆ ನೋಡಿಕೊಳ್ಳುವುದೇ ಆಗಿದೆ. ನನ್ನ ಜಮೀನು, ಅವರ ಜಮೀನಲ್ಲ ಎಂದು ಕಲ್ಪನೆಮಾಡಿಕೊಳ್ಳುವುದು ಅಥವಾ ನಷ್ಟ ಮಾಡಬೇಕೆಂದು ಜೋಡೀದಾರ ಆ ಜಮೀನಿನಲ್ಲಿರತಕ್ಕ ಮರ ಕಡಿಯುವುದು ಅಥವಾ ರೈತರ ಮುಂದೆ ಜಮೀನು ತನ್ನ ಕೈತಪ್ಪಿಹೋಗಬಹುದೆಂದು ಈಗಲೇ ಮರಗಳನ್ನು ಕಡಿದುಕೊಂಡು ಹಾನಿಯನ್ನುಂಟುಮಾಡುವುದು— ಈ ರೀತಿ ಯಾವುದೂ ನಡೆಯಕೂಡದೆಂದು ಈ ಕಾನೂನನ್ನು ತಂದಿದೆ. ಒಂದುವೇಳೆ ಸೌದೆ ಕಡಿಯಬೇಕಾದರಾಗಲೀ, ಅಡಿಕೆ ಪಟ್ಟೆ ಸೆಳೆಯುವುದಕ್ಕಾಗಲೀ ಅಡ್ಡಿ ಬಾರದಂತೆ ರೂಲ್ಸ್ ಮಾಡತಕ್ಕ ಅಧಿಕಾರವನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಅದನ್ನುಮಾಡುತ್ತಾರೆ ಎಂದು ಹೇಳತಕ್ಕ ವಿಶ್ವಾಸ ನನಗೆ ಉಂಟು. ರೈತರ ಮತ್ತು ಜೋಡೀದಾರರ, ಇಬ್ಬರ ಹಕ್ಕಿಗೂ ಯಾವ ವಿಧವಾದ ಚ್ಯುತಿ ಉಂಟಾಗದ ರೀತಿಯಲ್ಲಿ, ಇದ್ದ ಪರಿಸ್ಥಿತಿಯನ್ನು ಇದ್ದಹಾಗೇ ಕಾಪಾಡಿಕೊಂಡು ಬರುವುದಕ್ಕೆ ಕಾನೂನು ಮಾಡಿದ್ದಾರೆ, ಇದನ್ನು ಅಂಗೀಕಾರ ಮಾಡುವುದರಲ್ಲಿ ಯಾರಿಗೂ ತೊಂದರೆಯಾಗುವುದಿಲ್ಲ. ಇದರಿಂದ ಜೋಡೀದಾರರಿಗೆ ತೊಂದರೆಯೆಂದು ಯಾರೂ ಮನಸ್ಸಿನಲ್ಲಿಟ್ಟುಕೊಳ್ಳಬಾರದು. ರೈತರ ಹಕ್ಕುಬಾಧ್ಯತೆಗಳ ರಕ್ಷಣೆ ಎಷ್ಟುಮಟ್ಟಿಗೆ ಅವಶ್ಯಕವೋ ಜೋಡೀದಾರರ ಹಕ್ಕುಬಾಧ್ಯತೆಯೂ ಅಷ್ಟೇ ಅವಶ್ಯಕವೆಂಬುದನ್ನು ಸರ್ಕಾರದವರು ಮನಗಂಡು ಅವರಿಗೂ ರಕ್ಷಣೆ ಕೊಟ್ಟಿದ್ದಾರೆ. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎಂಬಂತೆ ಮಾಡಿಲ್ಲ. ಒಂದೇ ಸಮಾನವಾದ ರಕ್ಷಣೆಯನ್ನು ಈ ಕಾನೂನಿನಲ್ಲಿ ಕೊಟ್ಟಿದ್ದಾರೆ. ಇದನ್ನು ಒಪ್ಪಿಕೊಳ್ಳುವುದರಲ್ಲಿ ಯಾವ ವಿಧವಾದ ತೊಂದರೆಯೂ ಇಲ್ಲ. ದೇಶಕ್ಕೆ ಕ್ಷೇಮಕರ ಎಂಬುದನ್ನು ಶ್ರೀ ಸಿದ್ದಪ್ಪನವರು ಮತ್ತು ಶ್ರೀ ಹುಚ್ಚೇಗೌಡರ ಗಮನಕ್ಕೆ ತರಲು ಪ್ರಯತ್ನಮಾಡಿದ್ದೇನೆ. ಇಷ್ಟು ಹೇಳಿ ಈ ಮಸೂದೆಯನ್ನು ಪುಷ್ಟೀಕರಿಸುತ್ತೇನೆ.

* ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ) —ಈ ಮಸೂದೆಯ ಪ್ರಾರಂಭದಲ್ಲೇ ಹೇಳಿರುವಂತೆ this is a Bill to provicle for temporary protection of tenants in alienated villages in Mysore. ಈ ಒಂದು ತಾತ್ಕಾಲಿಕವಾದ ರಕ್ಷಣೆಯನ್ನು ರೈತರಿಗೂ ಮತ್ತು ಶ್ರೀ ಸುಬ್ರಹ್ಮಣ್ಯರವರು ಹೇಳಿದ ಹಾಗೆ ಜಮೀನ್‌ದಾರರಿಗೂ ಒದಗಿಸಿದ್ದಾರೆ. ಇದು ಪರಿಪೂರ್ಣವಾಗಿದೆ ಎಂದು ಇದನ್ನು ಸೂಚಿಸಿದ ಮಾನ್ಯ ರೆವಿನ್ಯೂ ಸಚಿವರೂ ಸಹ ಹೇಳಿದ್ದಾರೆ. ಮುಂದಿನ ಅಸೆಂಬ್ಲಿ ಹೊತ್ತಿಗೆ ಬೇರೆ ಸಂಪೂರ್ಣವಾದ ಮಸೂದೆ ಬರುತ್ತದೆ ಎಂದು ತಿಳಿಸಿದರು. ಈಗ ಶ್ರೀ ಹುಚ್ಚೇಗೌಡರು ಮಾತನಾಡುವಾಗ ಇದನ್ನು ವಿರೋಧಿಸುತ್ತಾ ಸೌದೆ ಕಡಿಯುವವರು ಡೆಪ್ಯೂಟಿ ಕಮೀಷನರವರ ಹತ್ತಿರ ಹೋಗಬೇಕಾಗುತ್ತದೆಂದು ಹೇಳಿದರು. ಹೌದು, ತೊಂದರೆಯಾಗುತ್ತದೆ. ಅದನ್ನು ನರಿಪಡಿಸಿಕೊಳ್ಳಬಹುದು. 4 ನೇ ಸೆಕ್ಷನ್‌ನಲ್ಲಿ ನಾನು ಒಂದು ವಿಚಾರವನ್ನು ಮಾತ್ರ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. 4ನೇ ಸೆಕ್ಷನ್ ಏನು ಹೇಳುತ್ತದೆ ಎಂದರೆ:—

"When owing to inadequate rain fall in any tract the State Government orders the suspeusion or remission of assessment in respect of lands in the said tract, the rent or land revenue payable by a tenant in an alienated village in the said tract to his superior holder shall be deemed to have been suspended or remitted in the same propo tion as the assessment due to the State Government in such tract in respect of un-alienated villages is suspended or remitted."

ಇದು ಬಹಳ ಸೂಕ್ತವಾದದ್ದು. ಇದುವರೆಗೂ ಈ ಅವಕಾಶ ಇಲ್ಲದೇ ಇದ್ದದ್ದನ್ನು ಈಗ ಮಾನ್ಯ ಸಚಿವರು ಕಲ್ಪಿಸಿ ಕೊಟ್ಟಿರುವುದು ಶ್ಲಾಘನೀಯ. ಇದೇ ಸಂದರ್ಭದಲ್ಲಿ ನಾನು ಒಂದಂಶವನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಹಾಲ ಜೋಡಿ, ಇನಾಂ ಮುಂತಾದ ಗ್ರಾಮಗಳಲ್ಲಿ ಜೋಡಿ ಅಥವಾ ಕ್ವಿಟ್ ರೆಂಟ್ ಕೊಡತಕ್ಕದ್ದು ಆಯಾ ಗ್ರಾಮದ ಇನಾಂದಾರರ ಅಥವಾ ಜೋಡಿದಾರರ ಮೇಲೆ ಬಿದ್ದಿದೆ. ನೀವು ರೈತರಿಗೆ ಕಂದಾಯದ ರಿಮಿಷ್ಷನ್ ಆರ್ಡರ್ ಮಾಡುವ ಪಕ್ಷಕ್ಕೆ ಅದಕ್ಕನುಸಾರವಾಗಿ ಜೋಡಿದಾರರು ಕೊಡಬೇಕಾಗಿರುವ ಕ್ವಿಟ್ ರೆಂಟ್ ಅಥವಾ ಜೋಡಿ ಕೂಡ ದಾಮಾಷಾ

ಮೇರೆಗೆ ಕಡಿಮೆ ಮಾಡಲ್ಪಡುತ್ತದೆಂಬುದು ಇಲ್ಲಿ ವ್ಯಕ್ತ ಪಡುವುದಿಲ್ಲ. ಆದ್ದರಿಂದ ಯಾವ ಪ್ರದೇಶಕ್ಕಾದರೂ ಕಂದಾಯದ ರೆಮಿಷನ್ ಮಾಡುವುದಾದರೆ, ಅದೇ ರೀತಿಯ ರಿಯಾಯಿತಿ ಜೋಡಿ, ಕೈಚೆರೆಂಟ್ ಕಟ್ಟುವ ಇನಾಂದಾರರಿಗೂ ಸಲ್ಲುವಂತೆ ಮಾಡಬೇಕು. ಮಾನ್ಯ ಸಚಿವರು ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ನಿಬಂಧನೆಗಳನ್ನು ರಚಿಸುವುದರಲ್ಲಿ ಸರಿಪಡಿಸುತ್ತಾರೆಂದು ನಂಬಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಅಧ್ಯಕ್ಷರೇ, ಈ ಮಸೂದೆಯಿಂದ ನಿಜವಾಗಿಯೂ ರೈತರಿಗೆ ಏನಾದರೂ ಸೌಕರ್ಯವುಂಟಾಗುವುದಾದರೆ ನಾನೂ ಕೂಡ ಸ್ವಾಗತಿಸುತ್ತೇನೆ.

ಶ್ರೀ ಎಚ್. ಸಿದ್ದಯ್ಯನವರು.—ಅನುಮಾನವೇ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆದರೆ ಒಂದು ವಿಚಾರ ಹೇಳಬೇಕು. ಕಾರ್ಪಸ್ಟಿಟ್ಯೂಷನ್ನಿನ 213 ನೆಯ ವಿಧಿಯ ಪ್ರಕಾರ ಯಾವುದೇ ಆರ್ಡಿನೆನ್ಸ್‌ನ್ನೂ ಬರುವ ಶಾಸನ ಸಭೆಯ ಮುಂದೆ ತರಬೇಕೆಂದಿದೆ. ಹಾಗೆ ಮಾಡದೆ ಆರ್ಡಿನೆನ್ಸನ್ನೇ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶವಿಲ್ಲ. ಇದಕ್ಕೆ ಉತ್ತರವಾಗಿ ಹೇಳುತ್ತಾ 'it is not worthwhile to summon the legislature' ಎಂದು ಹೇಳಿದರು.

ಶ್ರೀ ಕೆ. ಟಿ. ಭಾಷ್ಯಂರವರು.—ಹಾಗಲ್ಲ. ನಾನು ಹೇಳಿದ್ದು "it is not worthwhile calling a session of the Assembly merely to have one ordinance passed into law" ಎಂದು

ಶ್ರೀ ಬಿ. ಹುಚ್ಚೇಗೌಡರು.—It is not one ordinance. We are coming across several ordinances. ಪ್ರಜಾನತ್ರಾತ್ಮಕ ರಾಜ್ಯ ಭಾರ ರೂಢಿಗೆ ಬಂದಿರುವಾಗ ಈ ಪ್ರಕಾರ 'Rule by Ordinances' ಇರುವುದು ಸರಿಯಲ್ಲ. ಮೊದಲೇ ಸಕಾಲದಲ್ಲಿ ಈ ಸಭೆಯ ಅಧಿವೇಶನ ಬಂದಿದ್ದರೂ ಅದರಲ್ಲಡದೆ ಅದಾದ ಮೇಲೆ ಆರ್ಡಿನೆನ್ಸ್‌ನ್ನು ಮುಂದುವರಿಸುವುದಕ್ಕೆ ಕಾರ್ಯಕ್ರಮ ಕೈಕೊಳ್ಳುವುದು ಸೂಕ್ತವಲ್ಲ. ಈ ಸಭೆಯನ್ನೂ ಕೂಡ ತಾತ್ಕಾರ ಮನೋಭಾವದಿಂದ ನೋಡಿದಂತಾಗುತ್ತದೆ. ಸರ್ಕಾರದ ಕಡೆ ಈ ಸಭೆಯಲ್ಲಿ ಇಷ್ಟೊಂದು ಬಹುಮತ ಬೆಂಬಲವಿದ್ದರೂ ಈ ವಿಚಾರದಲ್ಲಿ ಏಕೆ ಹಿಂಜರಿದರೋ ಗೊತ್ತಿಲ್ಲ! ಅಧಿವೇಶನ ಸೇರುವುದಕ್ಕೆ ಹಿಂದೆ ಒಂದು ಆರ್ಡಿನೆನ್ಸ್ ಮಾಡುವುದು, ಅದನ್ನು ಸಭೆಯಲ್ಲುದದೆ ಅಧಿವೇಶನವಾದ ಕೆಲವು ದಿನಗಳಲ್ಲಿ ಮತ್ತೊಂದು ಆರ್ಡಿನೆನ್ಸ್ ಮಾಡಿಕೊಳ್ಳುವುದು ಎಂದರೆ ಏನರ್ಥ!

ಆಮೇಲೆ, ಈ ಆಕ್ಟನ್ನು ಜಾರಿ ಮಾಡಿರುವುದರಿಂದ ರೈತರಿಗೆ ಎಷ್ಟು ಹೆಚ್ಚಿನ ತೊಂದರೆಯಾಗುತ್ತದೆಯೆಂಬುದನ್ನು ಸ್ವಲ್ಪಮಟ್ಟಿಗೆ ತಮ್ಮ ಗಮನಕ್ಕೆ ತರಲಚ್ಚಿಸುತ್ತೇನೆ. ಇದರಲ್ಲಿ ರೈತನು ತಾನು ಜಮಿಾನನ್ನು 1945 ನೆಯ ಇಸವಿಯಿಂದಲೂ ಅನುಭವಿಸಿಕೊಂಡು ಬರುತ್ತಿರುವೆನೆಂದು ರುಜುವಾತು ಮಾಡಬೇಕು. ಸಾಮಾನ್ಯವಾಗಿ ಎಷ್ಟೋ ಕಡೆ ಜೋಡಿದಾರರುಗಳೂ ರಶೀದಿಯನ್ನೇ ಕೊಟ್ಟಿರುವುದಿಲ್ಲ, ಅಂಥ ಸಂದರ್ಭಗಳಲ್ಲಿ ಜೋಡಿದಾರರು ಅತನನ್ನು ಬಿಡಿಸುವುದಕ್ಕೆ ಪ್ರಯತ್ನ ಪಟ್ಟರೆ ಅವನೇನು ಮಾಡಬೇಕು? ಅದಕ್ಕೆ ಬದಲಾಗಿ ನೀವೇ ಇನಾಂದಾರರ ಜಮಿಾನುಗಳೆಲ್ಲವನ್ನೂ ಊರಿನ ರೈತರಿಗೆಲ್ಲರಿಗೂ ಹಂಚಿಬಿಟ್ಟಿದ್ದರೆ ಯಾವ ತೊಂದರೆಗೂ ಅವಕಾಶವಿರುತ್ತಿರಲಿಲ್ಲ. ರೈತರು ನೆಮ್ಮದಿಯಿಂದ ವ್ಯವಸಾಯ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ಈಗ ನೀವು ಮಾಡಿರುವುದೇನಿದ್ದರೂ ಇಲ್ಲದ ವ್ಯವಹಾರಕ್ಕೆ ಸಿಕ್ಕಿ ಕೋರ್ಟಿನಲ್ಲಿ ಹಣ ಖರ್ಚು ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿದ್ದೀರಿ. Retrospective effect ಕೊಟ್ಟು ಅದರಲ್ಲಿ prove ಮಾಡುವ ಜವಾಬ್ದಾರಿ ರೈತನ ಮೇಲೆ ಹಾಕಿದ್ದೀರಿ! ಆಮೇಲೆ, 6ನೆಯ ಸೆಕ್ಷನ್ನಿನಲ್ಲಿ ಯಾವುದಾದರೂ ರೈತನು ಈಚೆಗೆ 1948 ರಿಂದ ಹೊಸದಾಗಿ ಯಾವುದಾದರೂ ಜಮಿಾನನ್ನು ತೆಗೆದುಕೊಂಡು ಅದನ್ನು ಮಾಡುತ್ತಿದ್ದರೆ ಅವನಿಗೆ ತನ್ನ ಜಮಿಾನು ಉಳಿಸಿಕೊಳ್ಳಬೇಕಾದರೆ ಎಷ್ಟು ಕಷ್ಟವೆಂಬುದನ್ನು ನೋಡಿ. He must satisfy.

"(a) that the transaction has been entered into in good faith; or

(b) that the transaction has been entered into for valuable consideration; or

(c) that confirmation is necessary for maintaining the agricultural economy of the State."

ಇಂಥಾ ಕಾನೂನನ್ನು ಹಿಂದಿನಿಂದ ಜಾರಿಗೆ ಕೊಡುವುದೆಂದರೆ ಹೇಗೆ? ಯಾವನಾದರೂ ತನಗೆ ಸಾಲವಿದ್ದು ಮಾರಿಕೊಂಡಿದ್ದರೂ ಅದು *bona fide* ಯಾಗಿ ಮಾಡಿದ್ದಲ್ಲವೆಂದು ಹೇಳಿದರೆ ಹೇಗೆ! ಈ ಸೆಕ್ಷನ್ನು ಒಬ್ಬ ವ್ಯಕ್ತಿಯ ಮೂಲಭೂತ ಹಕ್ಕಿಗೇ ವ್ಯತಿರಿಕ್ತವಾಗಿಲ್ಲವೇ? ಮುಂದೆ ಯಾರಾದರೂ ಏನಾದರೂ ಕೋರ್ಟಿಗೆ ಹೋದರೆ, ಆಗ ಈ ಸಭೆಯವರು ಮಾಡಿದ ಕಾನೂನನ್ನು ಕೋರ್ಟಿನಲ್ಲಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡುವುದೇ? ಆದ್ದರಿಂದ ಯಾವ ಪಾರ್ಟಿಗೇ ಆಗಲಿ ತೊಂದರೆ ಬರುವಂತಿರಬಾರದು. ಇತರ ಸಂಸ್ಥಾನಗಳಲ್ಲಿ ನೋಡುವುದಾದರೆ ಅಲ್ಲೆಲ್ಲಾ ಜಮಿಾನ್ದಾರ್ರೀ ಬಿಲ್ಲನ್ನು ತಂದಿದ್ದಾರೆ. ನೀವಾದರೋ ಇಲ್ಲಿ ದೊಡ್ಡದಾಗಿ 27 ಜನರ ಒಂದು ದೊಡ್ಡ ಸಮಿತಿಯನ್ನು ಮಾಡಿಬಿಟ್ಟಿರಿ. ಸಮಿತಿಯೆಂದು ಕರೆಯುವ ಬದಲು ಸಭೆಯೆಂದು ಕರೆದರೂ ಕರೆಯಬಹುದು. ಏಕೆಂದರೆ ಇವರ ಸದಸ್ಯ ಸಂಖ್ಯೆ ಹಾಗಿದೆ. ಇನಾಂದಾರರ ಜೋಡಿದಾರರುಗಳ ವಿಷಯವನ್ನು ತೀರ್ಮಾನ ಮಾಡಲು ಇಷ್ಟೊಂದು ಕಷ್ಟಕ್ಕೆ ಕಾರಣವಿಲ್ಲ. ಎಷ್ಟೋ ಸಲ ಈ ಸಭೆಯಲ್ಲೇ ಆ ವಿಚಾರ ಚರ್ಚೆಯಾಗಿತ್ತು. ಇದಕ್ಕೆ 27 ಜನರ ದೊಂದು ಅತಿ ದೊಡ್ಡ ಸಮಿತಿಯೇ! ಹೀಗೆ ಸಮಿತಿ ಮಾಡಿ ಮೂರು ವರ್ಷ ತಡ ಮಾಡಿಬಿಟ್ಟಿರಿ. ಈಗಲೂ ಕೂಡ ಈ ಮಸೂದೆಯನ್ನು ವಾಪಸ್ಸು ತೆಗೆದುಕೊಂಡು ಸರಿಯಾದ ರೀತಿಯಲ್ಲಿ ರೈತರಿಗೆ ಅನುಕೂಲವಾಗುವಂತೆ ಮಾಡಿದರೆ ನಿಜವಾಗಿ ನ್ಯಾಯ ಮಾಡಿದಂತಾಗುತ್ತದೆ. ಏತಕೆಂದರೆ ನಿಮ್ಮ ಉದ್ದೇಶವೇನೇ ಇದ್ದರೂ ಇಲ್ಲಿ ಕಾನೂನಿನಲ್ಲಿ ಹೇಳಿರುವ ಪ್ರಕಾರವೇ ಹೋಗಬೇಕಾಗಿರುತ್ತದೆ. ರೈತರು ಬಹಳವಾಗಿ ಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ. ಕಾನೂನು ಜಾರಿ ಮಾಡುವುದರಲ್ಲಿ ಹೆಚ್ಚಿಗೆ ಕಷ್ಟವಿರಬಾರದು. ಉದಾಹರಣೆಗೆ ಇಲ್ಲಿ ರೈತನು must be in possession of the land uninterruptedly from the first day of July 1946. ಅನೇಕ ರೈತರಿಗೆ ಇದು ಬಹಳ ಕಷ್ಟ. ಆಮೇಲೆ ಒಂದು ಮರ ಕಡಿಯುವ ವಿಚಾರವಾದರೂ ಎಷ್ಟು ಕಷ್ಟವಿದೆ ನೋಡಿ. ಸಾಗು ಮಾಡುವವನು ಹೊಸದಾಗಿ ಎರಡು ವರ್ಷಗಳ ಹಿಂದೆ ಕೊಂಡು ಕೊಂಡಿದ್ದಾನೆ. ಅವನಿಗೆ ಈ ಆಕ್ಟಿನ ಪ್ರಕಾರ ಮರಗಳನ್ನು

ಕಡಿಯುವುದಕ್ಕೆ ಅವಕಾಶವಿರುತ್ತದೆಯೇ ಅಥವಾ ಮೊದಲು ಜಮೀನು ಯಾರಿಗೆ ಸೇರಿತ್ತೋ ಅವನು ಕಡಿಯಬಹುದೇ? ಇವೆಲ್ಲಾ ಅನುಮಾನದ ವಿಷಯಗಳಾಗಿವೆ. ಹೀಗೆ ಅನೇಕ ರೀತಿಯಲ್ಲಿ ತೊಡಕುಗಳಿಗೆ ಅವಕಾಶವಿದೆ. ಮೊದಲನೆಯದಾಗಿ, ದಾಖಲೆಗಳನ್ನು ಹೊಂದಿಸಿಕೊಡುವುದೇ ಕಷ್ಟ. ಆದ್ದರಿಂದ ಈ ಮನೂದೆಯನ್ನು ಪಾಪಸ್ಸು ತೆಗೆದುಕೊಂಡು ಬೇರೊಂದು ಸರಿಯಾದ ಮನೂದೆಯನ್ನು ತರಬೇಕೆಂದು ಹೇಳುತ್ತೇನೆ. ಇನ್ನು ಮೇಲಾದರೂ ಆರ್ಡಿನೆನ್ಸ್‌ಗಳನ್ನು ಒಂದರ ಮೇಲೆ ಇನ್ನೊಂದು ತರುವುದನ್ನು ಬಿಟ್ಟು ಬಿಡಬೇಕೆಂದು ಹೇಳಿ ನಾನು ಈ ಮನೂದೆಯನ್ನು ವಿರೋಧಿಸುತ್ತೇನೆ.

*Sri M. GOVINDA REDDY (Chitaldrug District—General).—Sir, in going my support to this Bill I shall deal with only one pertinent point raised by the Hon'ble Member Sri L. Siddappa. He has subjected the Bill to a discriminatory treatment. He deems that this Bill while making provisions applicable only to Inamdars has left out of consideration the measures that should apply to tenants in ryotwari village. Whereas the tenant under inamdar is protected the tenant under a ryotwari zamindar is not protected and therefore he has questioned the justification of this. Of course apparently there is this discriminatory treatment. But I believe it is misleading. We have in order to understand this point realise the peculiar position in which the tenant under Inamdar is placed. The Inamdar has got the whole village. There are no ryotwari tenants in that village. If a tenant should be dispossessed in an Inam village, he will be thrown out of employment and in that village he will have no other land to till. What is obtaining in Inam villages is this. The tenants are not contracted under awritten agreement to an Inamdar. By tradition, by long usage they haev become tenants under agreed and accepted conditions of tenancy which have come into effect and which have been enjoyed since their forefathers. In the absence of any written contract if the tenant is deprived of his rights which he has come to acquire by long usage, then there is no other remedy open to him.

Sri L. SIDDAPPA.—May I interrupt the Hon'ble Member for purposes of clarification? May I know what exactly the opinion of my Hon'ble friend is? His argument is that in the case of Inam villages there are no other lands available and that if a tenant is dispossessed, he will have no lands by which he could eke out his livelihood. There are certain ryotwari villages which are held by certain ryotwari zamindars. Even there if the land-lord evicts a tenant, he will have no other lands available. In such cases what is the remedy?

Sri M. GOVINDA REDDY.—I will come to that. In such cases the tenant will have the remedy in a Civil Court. His tenancy will not have been a long established one. He will have entered into tenancy agreement by a written document or he will be able to prove with the help of other ryots that are there, who can vouchsafe for the tenancy agreement. He can adduce evidence in a Court of law to get his remedy. But it is not so in the case of a tenant in an Inam village. In an Inam village, all the tenants are bound to the Inamdar by an agreement of tenancy. They will have to live at the mercy of the Inamdar and therefore when a question goes to Court, those tenants will not be able to be in an independent position of helping the particular ryots and therefore the remedy here is restricted in the absence of written agreement. Because almost all others are tenants of the Inamdar and there is no independent tenant, he does not get sufficient support from the neighbours. This is the position. There are no accounts and no written agreements. A tenant under an Inamdar is in a very peculiar position and therefore the protection proposed to be afforded by this Bill is very necessary. As soon the Land Revision Committee was appointed, it is within my knowledge that in several Inam villages, the tenants were tried to be dispossessed. In one village—I know in Venkatapura in Pavagada Taluk, the Inamdar tried to sell away his Inam rights to others, dispossessing these tenants of their lands and if the records of the Sub-Registrar's Office are seen there will be so many alienation documents registered during that time. In Kolar District it is within my knowledge that how many of the Jodidars and Inamdars tried to remove

trees in those lands and to dispossess in other ways the tenants, thus putting the tenants to a lot of trouble. (*A Voice*: There are no trees at all). It is particularly this emergency that persuaded the Government to take this action. What the Bill proposes to do is not to acquire any right. No right has been proposed to be acquired here and the Inamdar is not prevented from the lawful exercise of any right. What this Bill proposes is only to see that the Inamdar does not violate any of the rights already acquired by a tenant. Therefore, there is no difficulty in the House giving its support to this Bill.

*ಶ್ರೀ ಬಿ. ಚನ್ನಬ್ಯೆರೇಗೌಡರು (ಬೆಂಗಳೂರು ಜಿಲ್ಲೆ).— ಸ್ವಾಮಿ, ನಾನು ಈ ಮಸೂದೆಯನ್ನು ವಿರೋಧಿಸ ಬೇಕಾಗಿದೆ. ಆದರೆ ಜೋಡಿದಾರರ ಪರವಾಗಿ ಆಗಲೀ ಅಥವಾ ಬಂಡವಾಳಶಾಹಿಗಳ ಪರ ವಾಗಿ ಆಗಲೀ ವಿರೋಧಿಸುತ್ತಿದ್ದೇನೆಂದು ದಯವಿಟ್ಟು ಯಾರೂ ಭಾವಿಸಬಾರದು. ಆರ್ಡಿನೆನ್ಸ್ ಇರತಕ್ಕ ರೀತಿ ನೀತಿಗಳ ಮೇಲೆ ನಾನು ಇದನ್ನು ವಿರೋಧಿಸು ತ್ತಿದ್ದೇನೆ. ಇಂಡಿಯನ್ ಕಾನ್ಸ್ಟಿಟ್ಯೂಷನ್ನಿನ ಆರ್ಟಿ ಕಲ್ 19 ರಲ್ಲಿರುವ ಕ್ಲಾಸ್ (ಎಫ್) ಪ್ರಕಾರ ನಾನು ಈ ಮಸೂದೆಯಲ್ಲಿ ಆಡಕಮಾಡಿರುವ 3, 6 ಮತ್ತು 8ನೆಯ ಸೆಕ್ಷನ್‌ಗಳನ್ನು ವಿರೋಧಿಸಬೇಕಾಗಿದೆ. ರೈತನು ತನಗೆ ನ್ಯಾಯ ಸರಿಯಾಗಿ ದೊರೆಯಲಿಲ್ಲವೆಂದು ಅಪ್ಪೀಲು ಕೋರ್ಟಾದ ಹೈಕೋರ್ಟಿಗೆ ಅಪೀಲ್ ಮಾಡಿ ಕೊಳ್ಳಲು ಹಕ್ಕಿದೆ ಆರ್ಡಿನೆನ್ಸಿನಲ್ಲಿ ಆ ಹಕ್ಕನ್ನೇ ರದ್ದುಪಡಿಸಿ ದ್ದೀರಿ. ಇಂಡಿಯನ್ ಕಾನ್ಸ್ಟಿಟ್ಯೂಷನ್ ಆರ್ಟಿಕಲ್ 19 ಮತ್ತು 31 ರ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಸ್ವಾಧೀನದಲ್ಲಿರತಕ್ಕ ಆಸ್ತಿಪಾಸ್ತಿಗಳನ್ನು ತನ್ನ ಹಿತಕ್ಕಾಗಲೀ ಅಥವಾ ಸಾರ್ವಜನಿಕರ ಹಿತಕ್ಕಾಗಲೀ ಪರಭಾರೆ ಮಾಡಲು ಅತನಿಗೆ ಅಕ್ಷಿನ ಮೂಲಕವೇ ಅವಕಾಶವಿದೆ. ಹೀಗಿರುವಾಗ ನಾವು ಹಿಂದೂ ಮುಂದೂ ನೋಡದೆ ಯಾವುದಾದರೂ ಒಂದು ಕಾನೂ ನನ್ನು ಮಾಡಿ ಜನಗಳು ಅದರ ಮೇಲೆ ಹೈಕೋರ್ಟಿಗೆ ಅಪೀಲು ಹೋಗಿ ವ್ಯವಹಾರ ಹೂಡಿದಾಗ ಅವರು ಈ ರೆಜಿಸ್ಟ್ಲೇಷನ್ ಸರಿಯಾಗಿಲ್ಲ ಎಂಬುದಾಗಿ ಏನಾದರೂ ತೀರ್ಮಾನ ಕೊಟ್ಟಲ್ಲಿ ಅದು ಈ ಸಭೆಗೂ ಮತ್ತು ಆ ರೆಜಿಸ್ಟ್ಲೇಷನ್ ತಂದವರಿಗೂ ಎಲ್ಲರಿಗೂ ಅಗೌರವವಾಗ ಬಹುದು. ಅಂಥಾ ಪ್ರಸಂಗಗಳಿಗೆ ಅವಕಾಶ ಕೊಡಬಾರದೆಂದೂ ಅದನ್ನು ತಡೆಗಟ್ಟತಕ್ಕದ್ದು ನಮ್ಮೆಲ್ಲ ಕರ್ತವ್ಯವೆಂದೂ ನಾನು ಭಾವಿಸಿದ್ದೇನೆ. ಈಗ ತಾವು ಮಂಡಿಸಿರತಕ್ಕ ಮಸೂದೆಯಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆಂದು ನನ್ನ ಅಭಿಪ್ರಾಯ. ಅಷ್ಟೇ ಅಲ್ಲದೆ ಇದಕ್ಕೆ ತಾವು ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಟ್ಟು ಇದನ್ನು ಜಾರಿಗೆ ತಂದಿದ್ದೀರಿ. ಇದರಿಂದೇನು ತೊಂದರೆ ಯಾಗಬಹುದೆಂದರೆ ಈಗ ಒಬ್ಬ ಮನುಷ್ಯನು ಅಥವಾ ಒಬ್ಬ ರೈತನು ಒಬ್ಬ ಜೋಡಿದಾರನಿಂದಲೋ ಅಥವಾ ಖಾಯಂ ಗುತ್ತಾದಾರನಿಂದಲೋ ಒಂದು ಜಮೀನನ್ನು ಕೊಂಡುಕೊಂಡಿದ್ದಾರೆ; ಆ ಕ್ರಯ ಸಿಂಧುವಾಗತಕ್ಕ ಬಗ್ಗೆ ಅತನು ಜಿಲ್ಲಾಧಿಕಾರಿಗಳ ಅಪ್ಪಣೆಯನ್ನು ಪಡೆಯ ಬೇಕೆಂದು ಇದರಲ್ಲಿ ತಿಳಿಸಲಾಗಿದೆ; ಹಾಗೊಂದು ವೇಳೆ ಜಿಲ್ಲಾಧಿಕಾರಿಗಳು ಅಂಥ ಕ್ರಯವನ್ನು ಊರ್ಜಿತ ಮಾಡದೆ ಹೋದರೆ ಮುಂದೇನು ಮಾಡಬೇಕೆಂಬುದನ್ನೇ ತಾವು ತಿಳಿಸಿಲ್ಲ. ಆದರೆ ಇದರಿಂದ ಒಂದು ಅನುಕೂಲ ಕೆಲವರಿಗೆ ಆಗಬಹುದ. ಆ ಜಿಲ್ಲಾಧಿಕಾರಿಗಳು ತಮಗೆ ಯಾರು ಯಾರು ಬೇಕಾಗಿದ್ದಾರೋ ಅಂಥಹ ಕೆಲವರಿಗೆ ಇದರಿಂದ ಅನುಕೂಲ ಮಾಡಬಹುದು ಹೀಗೆ ಪಕ್ಷಪಾತ ಮಾಡಲು ಅವಕಾಶ ಉಂಟಾಗತಕ್ಕ ನನ್ನಿ ವೇಶಗಳಿವೆ. ಅಲ್ಲದೆ ಅತನಿಂದ ಹಕ್ಕನ್ನು ತಾವು ತೆಗೆದುಕೊಂಡರೆ ಅತನು ತನ್ನ ಅನಾನುಗಳನ್ನು ನಿವಾರಣೆ ಮಾಡಿಕೊಳ್ಳಲು ತಕ್ಕಷ್ಟು ಅವಕಾಶಗಳಿವೆ ಎಂಬುದನ್ನು ತಾವು ಈ ಮಸೂದೆಯಲ್ಲಿ clear ಆಗಿ ತಿಳಿಸಿರುವುದಿಲ್ಲ. ಆದುದರಿಂದ ಹೀಗೆ ಇದಕ್ಕೆ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಟ್ಟಿರುವುದು ಶುದ್ಧ ಅನ್ಯಾಯ ಮಾಡಿದಂತಾಗಿದೆ. ಆದುದರಿಂದ ನಾನ್ಯು ಹೇಳುತ್ತಿರುವುದೇನೆಂದರೆ ಇಂಡಿಯನ್ ಕಾನ್ಸ್ಟಿಟ್ಯೂಷನ್ ಆರ್ಟಿಕಲ್ 19 (ಎಫ್) ಪ್ರಕಾರವೂ ಮತ್ತು ಆರ್ಟಿಕಲ್ 31 ರ ಪ್ರಕಾರವೂ ಒಬ್ಬ ಸ್ವತ್ತನ್ನು ಕೊಂಡುಕೊಳ್ಳ ಲಿಕ್ಕೂ ಮತ್ತು ಮಾರಾಟ ಮಾಡಲಿಕ್ಕೂ ಅವಕಾಶವಿದೆ ಮತ್ತು ಅಧಿಕಾರವಿದೆ. ಅಷ್ಟೆಲ್ಲಾ ಕಾನೂನಿ ನಲ್ಲಿ ಅವಕಾಶವಿದ್ದರೂ ತಾವು ಮಧ್ಯೆ ಮಧ್ಯೆ ಹೀಗೊಂದು ಆರ್ಡಿನೆನ್ಸ್‌ನ್ನು ತಂದು ಜನರ ಹಕ್ಕು ಭಾಧ್ಯತೆಗಳಿಗೆ ಧಕ್ಕೆಯನ್ನು ತಂದೊಡ್ಡಿ ಅವರ ಸ್ವಾಧೀನ ದಲ್ಲಿರತಕ್ಕ ಜಮೀನುಗಳನ್ನು ಪರಭಾರೆ ಆಗದಂತೆ ಕೂಡ ದೆಂದು, ಅದರಲ್ಲಿರತಕ್ಕ ಮರ ಮಂಡಿಗಳನ್ನು ಕಡಿಯು ಕೂಡದೆಂದು ನಿರ್ಬಂಧಪಡಿಸತಕ್ಕದ್ದು ಶುದ್ಧ ಅನ್ಯಾಯ ವೆಂದು ಹೇಳುತ್ತೇನೆ.

ಹೊರಗಡೆ ದೇಶಗಳಲ್ಲಿರತಕ್ಕ ಎಂದರೆ ಮದರಾಸ್ ಇತ್ಯಾದಿ ಪ್ರಾಂತ್ಯಗಳಲ್ಲಿರತಕ್ಕ ಜೋಡಿ-ಜಹಗೀರುಗಳೂ ಮತ್ತು ನಮ್ಮ ಮೈಸೂರಿನಲ್ಲಿರತಕ್ಕವುಗಳಿಗೂ ಬಹಳ ವ್ಯತ್ಯಾಸವಿದೆ. ಹಿಂದೆ ಬ್ರಿಟಿಷರಿದ್ದ ಕಾಲದಲ್ಲಿ ತಮ್ಮ ಕೆಲವು ಏಜೆನ್ಸಿಗಳನ್ನು ಅಲ್ಲಲ್ಲೇ ಇಡುವುದಕ್ಕಾಗಿ ಜಮೀನ್ದಾರಿ ಪದ್ಧತಿಯೊಂದನ್ನು ಜಾರಿಗೆ ತಂದಿದ್ದರು. ಅದು ಕ್ರಮಕ್ರಮವಾಗಿ ಇಂದಿಗೂ ಕೆಲವರ ಹಕ್ಕಾಗಿ ಉಳಿದುಕೊಂಡು ಬಂದಿರುತ್ತೆ. ಆದರೆ ನಮ್ಮ ಮೈಸೂರಿನ ಜೋಡಿ-ಜಹಗೀರಿಗಳ ವಿಧಾನವೇ ಬೇರೆಯಾಗಿದೆ: ಇಲ್ಲಿನ ಜೋಡಿ ಜಹಗೀರಿಗಳು ಹಿಂದೆ ಕೆಲವರು ರಾಜಮನೆತನದವರಿಗೆ ಸಲ್ಲಿಸಿರತಕ್ಕ ಉನ್ನತವಾದ ಸೇವೆಗಾಗಿಯೂ ಮತ್ತೆ ಕೆಲವನ್ನು ಮಿಲಿಟರಿ ಇತ್ಯಾದಿ ಗಳಲ್ಲಿ ಸೇವೆ ಸಲ್ಲಿಸಿ ಬಂದವರಿಗಾಗಿಯೂ ಕೊಡಲ್ಪಟ್ಟ ವುಗಳಾಗಿವೆ. ಇಂಥಾ ಮಹತ್ಸೇವೆಯನ್ನು ಸಲ್ಲಿಸಿರ ತಕ್ಕಂಥವರಿಗೆ ಕೆಲವು ಗ್ರಾಮಗಳನ್ನು, ಕೆಲವ ರಿಗೆ ಕೆಲವು ತಾಲ್ಲೂಕುಗಳನ್ನು ಇನಾಂತಿ ಹಾಕಿ ಕೊಡಲಾಗಿದೆ. ಇವರಿಗೆ ಅಂಥ ಇನಾಂತಿಗಳನ್ನು ಮತ್ತು ಖಾಯಂ ಗುತ್ತಗಳನ್ನು ಮಾರಾಟ ಮಾಡಲು ಅವಕಾಶವೂ ಮತ್ತು ಅಧಿಕಾರವೂ ಇದೆ. ಈಗ ತಾವು ಇವುಗಳನ್ನೆಲ್ಲಾ ಕಿತ್ತುಕೊಳ್ಳಬೇಕೆಂದು ಮಾಡಿರುವುದು ಹಿಂದೆ ಯಾರು ಯಾವ ಉದ್ದೇಶಕ್ಕಾಗಿ ಇವುಗಳನ್ನು ಕೊಡಲಾಗಿತ್ತೋ ಅದಕ್ಕೆಲ್ಲ ಭಂಗ ತಂದಂತಾಗಿದೆ. ಈಗ ಯಾರಾದರೂ ಒಬ್ಬ ಮನುಷ್ಯನು ಬೆಂಗಳೂರಿನಲ್ಲಿ ಹತ್ತಾರುಸಾವಿರ ರೂಪಾಯಿಗಳನ್ನು ಕೊಟ್ಟು ಒಂದು ಮನೆಯನ್ನು ಕೊಂಡು ಕೊಂಡಿದ್ದರೆ, ಈಗ ತಾವು ಅತನಿಗೆ ಅಷ್ಟೊಂದು ಬೆಲೆಯ ಸ್ವತ್ತನ್ನು ಅನುಭವಿಸಲು ಹಕ್ಕಿಲ್ಲವೆಂದು ಅತನಿಂದ ಆ ಸ್ವತ್ತನ್ನು ಕಿತ್ತುಕೊಳ್ಳಲು ಸಾಧ್ಯವೇನು? ನಿಮ್ಮಿಂದ ಖಂಡಿತ ಇದು ಸಾಧ್ಯ ವಿಲ್ಲ. ಹೀಗಿರುವಾಗ ನೀವು ಬರೀ ಈ ಜೋಡಿ ಜಹ ಗೀರುದಾರರುಗಳಿಗೆ ಮಾತ್ರ ಇಂಥಾ ಒಂದು ಕಾನೂ ನನ್ನು ತಂದಿರುವುದು ಒಂದು ಕಣ್ಣಿಗೆ, ಬೆಣ್ಣೆ, ಒಂದು

ಕಣ್ಣಿಗೆ ಸುಣ್ಣ ಹಾಕುವಂಥಾ ನೀತಿಯಾಗಿದೆ. ಇಂಥ ಅನ್ಯಾಯಗಳನ್ನು ತಾವು ಮಡಬಾರದು. ಅದ್ದರಿಂದ ತಾವು ಈ ಆರ್ಡಿನೆನ್ಸನ್ನು ವಾಪಸು ತೆಗೆದುಕೊಳ್ಳ ಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಇದು ಆರ್ಡಿನೆನ್ಸ್ ಅಲ್ಲ. ಇದು ಒಂದು ಮಸೂದೆ.

ಶ್ರೀ ಬಿ. ಚೆನ್ನಬೈರೇಗೌಡರು.—ಶ್ರೀಮಾನ್ ಎಚ್. ಬಿ. ಗುಂಡಪ್ಪಗೌಡರು ಸಮಿತಿಯವರು ಶಿಫಾರಸ್ಸು ಮಾಡಿರುವುದರಲ್ಲಿ ಈ ಹೆಚ್ಚಿಗೆ ಜಮೀನ್ದಾರರುಗಳ ವಿಚಾರದಲ್ಲಿ ಹೇಳಿರತಕ್ಕ ಈ 3--4 ವಿಷಯಗಳು ಅನಾನುಕಾಲವಾದವುಗಳೆಂದು ಹೇಳಿ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಇನಾಂ ಗ್ರಾಮದ ರೈತರಿಗೆ ರಕ್ಷಣೆ ಕೊಡುತ್ತೇವೆಂದು ತಂದಿರುವ ಈ ಮಸೂದೆಯನ್ನು ಸ್ವಾಗತಮಾಡುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ವಿರೋಧ ಪಕ್ಷದ ಸದಸ್ಯರು ಕೂಡ ಈ ಮಸೂದೆಯ ಅನುಕೂಲತೆಯನ್ನು ವಿರೋಧಿಸುತ್ತಿದ್ದಹಾಗೆ ಕಾಣಲಿಲ್ಲ. ಆರ್ಡಿನೆನ್ಸ್ ತರಬಾರದಾಗಿತ್ತು ಎಂದು ಮಾತ್ರ ಹೇಳಿದ್ದಾರೆ. ಆದರೆ ಈಗ ಯಾವ ಆರ್ಡಿನೆನ್ಸೂ ನಮ್ಮ ಮುಂದಿಲ್ಲ. ಈಗ ಈ ಮಸೂದೆಯನ್ನು ತರಬೇಕ ಅಥವಾ ಬಿಡಬೇಕೆ ಎಂಬ ವಿಷಯ ಮಾತ್ರ ನಮ್ಮ ಮುಂದಿರುವುದು. ಒಂದು ಮಸೂದೆಯನ್ನಾಗಲಿ ಅಥವಾ ಆರ್ಡಿನೆನ್ಸ್‌ನ್ನಾಗಲಿ ಈಗಿನ ಪರಿಸ್ಥಿತಿಯಲ್ಲಿ ಏಕೆ ತರಬೇಕಾಗಿತ್ತು? ಇನಾಂ ಗ್ರಾಮಗಳ ರಕ್ಷಣೆ ಮತ್ತು ರೈತರ ರಕ್ಷಣೆ ಇಷ್ಟಕ್ಕಾಗಿ ಏಕೆ ಪ್ರತ್ಯೇಕ ಬಿಲ್ಲು ಈಗ ಬರಬೇಕಾಗಿತ್ತು ಎಂದು ಕೆಲವರು ಆಕ್ಷೇಪಿಸಿದರು. ಆದರೆ ಸಾಮಾನ್ಯವಾಗಿ ಈಗಿನ ಜೋಡಿಗ್ರಾಮಗಳ ರೈತರ ಪರಿಸ್ಥಿತಿ ಗೊತ್ತಾಗಿದ್ದರೆ ಆ ರೀತಿಯಾಗಿ ಅವರು ಹೇಳುತ್ತಿರಲಿಲ್ಲ ಎಂದು ತಿಳಿಸಬೇಕಾಗಿದೆ. ಜೋಡಿಗ್ರಾಮ ಮತ್ತು ಇನಾಂ ಗ್ರಾಮ ಹೆಚ್ಚಾಗಿರುವುದು ಕೋಲಾರ, ಬೆಂಗಳೂರು ಮತ್ತು ಬೇರೆ ಕೆಲವು ಕಡೆ. ಈ ಮಸೂದೆಯನ್ನು ವಿರೋಧಿಸಿದ ಮಾನ್ಯ ಸದಸ್ಯರ ಜಿಲ್ಲೆಗಳಲ್ಲಿ ಹೆಚ್ಚು ಜೋಡಿ ಗ್ರಾಮಗಳಿದ್ದಹಾಗೆ ಕಾಣುವುದಿಲ್ಲ. ಅಲ್ಲಿನ ಪರಿಸ್ಥಿತಿಯೇ ಬೇರೆ. ಎರಡು ಸಾವಿರ ಚಿಲ್ಲರೆ ಗ್ರಾಮಗಳಿರುವಲ್ಲಿ ಕೇವಲ ಕೆಲವು ಗ್ರಾಮಗಳಲ್ಲಿ ಮಾತ್ರ ಸರ್ವೆ ಸೆಟ್ಲ್‌ಮೆಂಟ್ ಆಗಿದೆ. ಯಾವ ಇನಾಂ ಗ್ರಾಮಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಆಗಿಲ್ಲವೋ ಆ ಗ್ರಾಮಗಳಲ್ಲಿ ಜೋಡಿದಾರರಿಗೂ ಮತ್ತು ರೈತರಿಗೂ ನಾನಾ ಘರ್ಷಣೆಗಳಾಗಿವೆ.

ಶ್ರೀ ಬಿ. ಚೆನ್ನಬೈರೇಗೌಡರು.—ಸರ್ವೆ ಸೆಟ್ಲ್‌ಮೆಂಟ್ ಮಾಡಬಹುದಲ್ಲವೆ?

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ರೈತರೂ ಅನೇಕ ಅರ್ಜಿ ಹಾಕಿದ್ದಾರೆ. ಆದರೆ ಜೋಡಿದಾರರು ಬೇಕಾಗಿಲ್ಲವೆಂದು ವಿರೋಧಿಸಿದ್ದಾರೆ. ಸರ್ಕಾರದ ವರೂ ಕೂಡ ಜೋಡಿ ಪದ್ಧತಿ ಹೋಗಬೇಕೆಂಬ ಉದ್ದೇಶವಿರುವುದರಿಂದ ಸರ್ವೆ ಸೆಟ್ಲ್‌ಮೆಂಟ್ ಮಾಡುವುದು ನಿಧಾನ, ಖರ್ಚು ಹೆಚ್ಚು ಎಂದು ಆಲೋಚನೆಮಾಡಿ ಅದು ಬೇಡವೆಂದು ಅನೇಕ ಜೋಡಿ ಗ್ರಾಮದ ರೈತರಿಗೆ ಜವಾಬು ಕೊಟ್ಟಿದ್ದಾರೆ. ಭೂ ಕಂದಾಯ ಸುಧಾರಣಾ ಸಮಿತಿಯ ವರು ತಮ್ಮ ವರದಿಯಲ್ಲಿ 2,100 ಜೋಡಿ ಗ್ರಾಮಗಳಲ್ಲಿ ಕೇವಲ 700ಕ್ಕೆ ಮಾತ್ರ ಸರ್ವೆ ಸೆಟ್ಲ್‌ಮೆಂಟ್ ಆಗಿದೆಯೆಂದು ಹೇಳಿದ್ದಾರೆ. ಅನೇಕ ಜೋಡಿ ಗ್ರಾಮಗಳಲ್ಲಿ ರೈತರಿಗೆ ನರಕ ಯಾತನೆಯೆಂದು ಹೇಳಿದರೆ ತಪ್ಪಾಗಲಾರದು. ಸಾಧಾರಣವಾಗಿ ಜೋಡಿ ಗ್ರಾಮದ ರೈತರ ವಿಷಯವನ್ನು ನಮ್ಮ ಮಿತ್ರರು ತಿಳಿದುಕೊಂಡಿಲ್ಲ. ಮಸೂದೆಯ ಮೂರು ಸೆಕ್ಷನ್‌ಗಳಲ್ಲಿ ರೈತರಿಗೆ ಪರಿಹಾರವಿದೆಯೆಂದು ಹೇಳಬಹುದು. ಆದರೆ ಇದರಿಂದ ಜೋಡಿ ರೈತರಿಗಿಂತ ಜೋಡಿದಾರರಿಗೆ ಹೆಚ್ಚು ಪರಿಹಾರವಿದೆಯೆಂದು ಅಭಿಪ್ರಾಯ ಪಡುವವರಲ್ಲಿ ನಾನೂ ಒಬ್ಬ. ಶ್ರೀ ಗುಂಡಪ್ಪಗೌಡರು ಹೇಳಿದಹಾಗೆ ರೈತರು ಕಂದಾಯ ಅಥವ ಕೊಡಬೇಕಾದ್ದನ್ನು ಕೊಡದೇ ಇದ್ದರೆ ಅವರನ್ನು ಒಡಿಸುವುದಕ್ಕೆ ಜೋಡಿದಾರರಿಗೆ ಹಕ್ಕೂ ಇದೆ. ಈಗ ಟೆನೆಂಟ್ಸ್ ಆಗಿದ್ದರೂ ಜೋಡಿ ಗ್ರಾಮಗಳಲ್ಲಿ ಖಡೀಂ ಟೆನೆಂಟ್ ಅಥವಾ ವಾರ ಟೆನೆಂಟ್ ಆಗಿರಬಹುದು. ಅವರು ಪರ್ಮನೆಂಟ್ ಟೆನೆಂಟ್ಸ್ ಅಥವಾ ವಾರ ಟೆನೆಂಟ್ಸ್ ಎಂದು ಅವರ ಹಕ್ಕು ಖಚಿತವಾಗಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೆ ಬೇಕಾದರೆ ಸರ್ವೆ ಸೆಟ್ಲ್‌ಮೆಂಟ್ ಜಾರಿಗೆ ತರಬಹುದು. ಆದರೆ ಜೋಡಿದಾರನು ರೈತನನ್ನು ಖಡೀಂ ಟೆನೆಂಟ್ ಎಂದು ಬೇಕಾದರೂ ಹೇಳಬಹುದು ಅಥವಾ ವಾರ ಟೆನೆಂಟ್ ಎಂದಾದರೂ ಹೇಳಬಹುದು. ಅಂಥ ಸಂದರ್ಭದಲ್ಲಿ ಅದನ್ನು ತೀರ್ಮಾನ ಮಾಡುವುದು ಹೇಗೆ? ಘರ್ಷಣೆ ಬಂದ ಮೇಲೆ ಜೋಡಿದಾರರು ರೈತರನ್ನು ಹೇಗೆ ಕಾಣುತ್ತಿದ್ದಾರೆಂಬುದನ್ನು ಗಮನಿಸಬೇಕು. ನೂರಾರು ವರ್ಷಗಳಿಂದ ಖಡೀಂ ರೈತನೆಂದು ತಿಳಿದು ಕಂದಾಯ ಕಟ್ಟಿಕೊಂಡು ಜಮೀನು ತನ್ನದೆಂಬ ಅಭಿಲಾಷೆಯಿಂದ ವರಗಳನ್ನು ಹಾಕಿ ಚೆನ್ನಾಗಿ ಬೆಳೆಸಿ ಜಮೀನನ್ನು ಫಲವತ್ತಾಗಿಯೂ ಉತ್ಕೃಷ್ಟವಾಗಿಯೂ ಮಾಡಿ ಅನುಭವಿಸುತ್ತಿರುತ್ತಾನೆ. ಆದರೆ ಜೋಡಿದಾರ ಈಗಿನ ಸಂದರ್ಭದಲ್ಲಿ ಯಾವ ದಾಖಲೆಯೂ ಇಲ್ಲದೇಯಿರುವುದರಿಂದ ಜಮೀನು ಬಿಡಿ ಎಂದು ಹೇಳುತ್ತಾನೆ. ಆಗ ಆ ರೈತರಿಗೆ ರಕ್ಷಣೆಯೇನು ಎಂಬುದನ್ನು ಗಮನಿಸಬೇಕು. ಕೆಲವು ಜೋಡಿ ಗ್ರಾಮಗಳಲ್ಲಿ 14–15ನೆಯ ನಂಬರುಗಳಲ್ಲಿ ನಮೂದಾಗಿದೆ. ಆದರೆ ಬಹು ಭಾಗದಲ್ಲಿ ದಾಖಲೆಯಿಲ್ಲ. ಮತ್ತೆ ರೈತರು ಕಂದಾಯ ಕೊಟ್ಟಿರುವುದಕ್ಕೆ ರಸೀತಿ, ಪಟ್ಟೆ, ಪಗ್ಗೈರೆ ಯಾವ ವಿಧವಾದ ದಾಖಲೆಯನ್ನೂ ಕೊಟ್ಟಿರುವುದಿಲ್ಲ. ಕೆಲವು ದಿನಗಳ ಹಿಂದೆ ನಾನು ಒಂದು ಜೋಡಿ ಗ್ರಾಮಕ್ಕೆ ಹೋದಾಗ ಅಲ್ಲಿಯ ಜೋಡಿದಾರರು ರೈತರ ಮೇಲೆ ದೂರು ಹೇಳಿದರು. ಈಗ ರೈತರು ಕಂದಾಯದ ರಸೀತಿ ಕೇಳುತ್ತಾರೆ ಎಂದು ಹೇಳಿದರು. ಸಂದರ್ಭ ಹೀಗಿರುವಾಗ, ರೈತರ ಹಕ್ಕು ಬಾಧ್ಯತೆಯ ವಿಷಯದಲ್ಲಿ ಯಾವ ದಾಖಲೆಯೂ ಇಲ್ಲದಿರುವಾಗ ಅವರನ್ನು ಹೇಗೆ ಕಾಪಾಡಬೇಕು, ಅವರಿಗೆ ರಕ್ಷಣೆ ಏನುಕೊಡಬೇಕು ಎಂದು ಒಂದು ತೀರ್ಮಾನಕ್ಕೆ ಬಂದರೆ, ಅದನ್ನು ಮಾನ್ಯ ಮಿತ್ರರು ವಿರೋಧಿಸುತ್ತಿರುವುದನ್ನು ನೋಡಿ ವ್ಯಸನವಾಗುತ್ತಿದೆ. ಸೆಕ್ಷನ್ ೪ರಲ್ಲಿ reserved land ಮತ್ತು land in the possession of tenants ವಿಚಾರ ಹೇಳಿದ್ದಾರೆ. ಜಮೀನು ಜೋಡಿದಾರನ ಸ್ವಾಧೀನದಲ್ಲಿದೆಯೇ ಅಥವಾ ಟೆನೆಂಟ್ ಸ್ವಾಧೀನದಲ್ಲಿದೆಯೇ ಎಂಬುದು ಒಂದು ಚರ್ಚಾಸ್ಪದವಾದ ವಿಷಯವಾಗಿದೆ. ಹಾಗಿರುವಾಗ ರಕ್ಷಣೆಗೆಂದು ಸರ್ಕಾರದವರು ಈ ಮಸೂದೆಯನ್ನು ತಂದಿದ್ದಾರೆ. ಮತ್ತು ರಿಸರ್ವ್‌ಡ್ ಲ್ಯಾಂಡ್ ಎಂಬುದಕ್ಕೆ ಗ್ರಾಮದಲ್ಲಿ ದಾಖಲೆಯೇ ಇಲ್ಲ. ಈಗ ಗೋಮಾಳದ ಜಮೀನಿದೆ. ಜೋಡಿದಾರರು ಅದನ್ನು ಅನುಭವಿಸುತ್ತಿರುತ್ತಾರೆಂದು ಹೇಳುತ್ತಾರೆ. ಆಗ ಅದನ್ನು ರಿಸರ್ವ್‌ಡ್ ಜಮೀನೆಂದು ಕೋರ್ಟಿನಲ್ಲಿ ತೀರ್ಮಾನಮಾಡುವುದಕ್ಕೆ ಆಧಾರವೇನು? ಟೆನೆಂಟ್ ಬಳಿ ಇರುವ ಜಮೀನನ್ನು ಪರಭಾರೆ ಮಾಡಕೂಡದೆಂದು ಹೇಳಿದ್ದಾರೆ. ಆದರೆ ಜೋಡಿದಾರ ಯಾವುದಾದರೂ ಜಮೀನು ತನ್ನ ಸ್ವಾಧೀನದಲ್ಲಿದೆಯೆಂದು ಹೇಳಬಹುದು.

ಆಗ ಇಲ್ಲ ಎಂದು ಹೇಳುವುದು ಹೇಗೆ? ಈಗ, ಜೆನೆಂಟು ಗಳಿಗೆ ಪರಿಹಾರ ಕೊಡಬೇಕೆಂದು ಹೊರಟರೂ ಹೆಚ್ಚು ರೈತರಿಗೆ ಸಹಾಯವಾಗುವ ಹಾಗೆ ಕಾಣುವುದಿಲ್ಲ. ಹೇಗಾದರೂ ಸಹಾಯ ಮಾಡುತ್ತೇವೆಂದು ಪ್ರಾರಂಭ ಮಾಡಿದ್ದಾರೆ. ಆದ್ದರಿಂದ ಹೆಚ್ಚು ಸಹಾಯಮಾಡಬೇ ಕೆಂಬ ಬೇಡಿಕೆಯನ್ನು ನಮ್ಮ ಮಿತ್ರರು ಸರ್ಕಾರದವರ ಮುಂದೆ ಇಡುತ್ತಾರೆ ಎಂದು ನಿರೀಕ್ಷಿಸಿದ್ದೆ. ಅದಕ್ಕೆ ಬದಲು ಇದು ಬೇಡ ಎಂದು ಹೇಳುತ್ತಿದ್ದಾರೆ!!

ಆ ಮೇರೆ ಮರ ಕಡಿಯಕೂಡದೆಂದು ನಿರ್ಬಂಧಮಾ ಡುವುದಾಗಿ ಹೇಳುತ್ತಾರೆ. ಇದಕ್ಕೆ ಜಿಲ್ಲಾಧಿಕಾರಿಗಳ ಅಪ್ಪಣೆಯಾಗಬೇಕೆಂದು ಹೇಳಿದ್ದರೂ ಈಗಾಗಲೇ ಬೇ ಕಾದಷ್ಟು ಮರಗಳನ್ನು ಕಡಿದುಹಾಕಿದ್ದಾರೆ. ಆದ್ದ ರಿಂದ ಈ ನಿರ್ಬಂಧದಿಂದಲೂ ಕೂಡ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ.

ಹೀಗೆ ಜೋಡಿ ಗ್ರಾಮಗಳ ರೈತರ ಹಕ್ಕು ಬಾಧ್ಯತೆ ಗಳು ಈಗಿನ ಪರಿಸ್ಥಿತಿಯಲ್ಲಿ ಬಹಳ ಅನಿಶ್ಚಿತವಾಗಿವೆ. ನಮ್ಮ ಸಂಸ್ಥಾನದ 16 ಸಾವಿರ ಹಳ್ಳಿಗಳ ಹೈಕಿ ಸುಮಾರು ಎರಡುಸಾವಿರ ಚಿಲ್ಲರೆ ಇಂಥ ಜೋಡಿಗ್ರಾಮ ಗಳಾಗಿವೆ. ಅಲ್ಲಿನ ಜನಸಂಖ್ಯೆ ಬಹಳ ಹೆಚ್ಚು. ಅವರ ಹಿತವನ್ನು ಸಾಧಿಸುವುದು ಬಹಳ ಮುಖ್ಯ. ಅದನ್ನು ನಿಧಾನ ಮಾಡುವುದರಿಂದ ಬಹಳ ಹಾನಿ, ತೊಂದರೆ ಹೆಚ್ಚುತ್ತದೆ. ನಮ್ಮ ಜಿಲ್ಲೆಯಲ್ಲಿ ವಡಗೂರು, ಬ್ಯಾಲ ಹಳ್ಳಿ, ಜೋಡಿ ಗಂಗಾಪುರ, ಬೌರಿಂಗ್‌ಪೇಟೆ ತಾಲ್ಲೂಕು ಬಡ ಬಾಕನಹಳ್ಳಿ ಮುಂತಾದ ಅನೇಕ ಜೋಡಿಗ್ರಾಮ ಗಳಲ್ಲಿ ಬಹಳ ತೊಂದರೆಯಾಗಿದೆ. ಕೆಲವು ಕಡೆ ಜೋ ಡಿದಾರರು ವಾನವಾಡುವುದಿಲ್ಲ. ಸರ್ಕಾರಿ ಕೆಲಸದಲ್ಲಿ ರುವವರು ಬೇರೆ ಕಡೆ ಇರುತ್ತಾರೆ. ಅಲ್ಲಿ ತೊಂದರೆ ಯಿಲ್ಲ. ಇನ್ನು ಕೆಲವು ಕಡೆ ಜೋಡಿದಾರರು ಗ್ರಾಮ ಗಳಲ್ಲೇ ಇರುವುದರಿಂದ ತೊಂದರೆ ಹೆಚ್ಚಾಗಿರಬಹುದು. ಮತ್ತೆ ಕೆಲವು ಕಡೆ ಜೋಡಿದಾರರು ತಮ್ಮ ಗ್ರಾಮ ಗಳಲ್ಲಿ ವಾನವಾಡದಿರುವುದರಿಂದ ತೊಂದರೆಯಾಗಿರ ಬಹುದು. ಒಟ್ಟಿನಲ್ಲಿ ಸರ್ವೆ ಸೆಟ್ಲ್‌ಮೆಂಟ್ ಇಲ್ಲದೇಯಿರುವ ಕಡೆ ಜೋಡಿ ಗ್ರಾಮಗಳ ಕ್ಷೇಮಕ್ಕಾಗಿ ಸಹಾಯಮಾಡ ಬೇಕೆಂಬ ಒಂದು ಭಾವನೆಯಿಂದ ಈ ಮಸೂದೆಯನ್ನು ತಂದಿದ್ದಾರೆ. ಆದರೆ ಇದು ಜಾರಿಗೆ ಬರುವುದಕ್ಕೆ ಮೊ ದಲೇ ಆದಷ್ಟು ಹಣ ಸಂಪಾದನೆ ಮಾಡಬೇಕೆಂಬ ಆಶೋ ತ್ತರದಿಂದ ಗೋಮಾಳ ಮುಂತಾದ ಜಮೀನನ್ನು ತಮ್ಮ ದೆಂದು ಮಾರಿಕೊಂಡಿದ್ದಾರೆ: ಅನೇಕ ಮರಗಳನ್ನು ಕಡಿದು ಏಲೇ ಮಾಡಿದ್ದಾರೆ. ಇದನ್ನು ತಡೆಮಾಡಲು ಈ ಕಾನೂನನ್ನು ತಂದಿದ್ದಾರೆ. ಇದರಿಂದ ಕೇವಲ ಸ್ವಲ್ಪ ಪ್ರಯೋಜನವಾಗುತ್ತದೆಂದು ಕಾಣುತ್ತದೆ. ಹೇಗಾದರೂ ಈ ಮಸೂದೆಯಾಕಾನೂನು ಪ್ರಯೋಜನಕಾ ರಿಯಾಗಿರುವುದೆಂದರಿಂದ ಎಲ್ಲರೂ ಇದನ್ನು ಸ್ವಾಗತಮಾಡ ಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Janab J. MAHOMED IMAM.—Sir, I move for closure. May I know how long this business will continue?

(Nobody stood up to *speak*)

Mr. SPEAKER.—The Hon'ble Minister will reply.

*ಶ್ರೀ ಎಚ್. ಸಿದ್ದಯ್ಯನವರು.—ನಾನು ಈಗ ದೀರ್ಘ ವಾದ ಉತ್ತರವನ್ನು ಹೇಳುವುದು ಅನಾವಶ್ಯಕ. ಇದಕ್ಕೆ ಕಾರಣವಿಷ್ಟೆ—ಈ ಮಸೂದೆಯನ್ನು ವಿರೋಧಿಸಿ ಮಾತನಾಡಿದ ಶ್ರೀಮಾನ್ ಹುಚ್ಚೇಗೌಡರು ಈ ಮಸೂದೆ ಬೇಡ, ಬೇರೆ ಹೊಸದಾಗಿ ತನ್ನಿ ಎಂದು ಹೇಳಿದರು. ಅವರ ಈ ವಾದ ನನಗೆ ಅರ್ಥವಾಗಲಿಲ್ಲ. ಶ್ರೀಮಾನ್ ಚನ್ನಬೈರೇಗೌಡರು ಇದು ಹೈಕೋರ್ಟಿಗೆ ಹೋದರೆ ನಿಲ್ಲುವುದಿಲ್ಲವೆಂದು ಹೇಳಿದರು. ಅವರು ಹೇಳಿದುದೂ ನನಗೆ ಅರ್ಥವಾಗುವುದಿಲ್ಲ. ಮುಂದೆ ಒಂದು ಪೂರ್ಣ ವಾದ ಕಾನೂನಾಗುತ್ತದೆ. ಈ ಮಸೂದೆಯಲ್ಲಿ ನ್ಯೂ ನತೆ ಇದೆ ಎಂದು ತಿಳಿದು ಅವರು ಇದನ್ನು ವಿರೋಧಿಸಿದ ರೆಂದು ಕಾಣುತ್ತದೆ. ಇದರಿಂದ ಇನಾಂದಾರರ ಜಮೀ ನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ, ಯಾವ ಪರಿ ಹಾರವನ್ನೂ ಅವರಿಗೆ ಕೊಡದೆ ಎಂದು ಅವರು ಅರ್ಥ ಮಾಡಿಕೊಂಡಿರಬಹುದು. ಇದರಲ್ಲಿ ಹಾಗೇನೂ ಇಲ್ಲ. ಶ್ರೀಮಾನ್ ಸಿದ್ದಪ್ಪನವರು ಹೇಳಿದಹಾಗೆ ರಾಜ್ಯಾಂಗದ 19 ಮತ್ತು 31ನೆಯ ವಿಧಿಗಳು ಇದಕ್ಕೆ ಅನ್ವಯಿಸು ವುದಿಲ್ಲ. ಅದಕ್ಕೆ ಅವರಿಗೆ 'ಆ ವಿಧಿಗಳನ್ನು ಪೂರ್ತಿಯಾಗಿ ಓದಿ' ಎಂದು ಹೇಳಿದರೆ, ಓದಿದ್ದೇನೆಂದು ಹೇಳಿಬಿಟ್ಟರು. 'ನಾರಾಯಣ ಎಂದೊಡೆ ಪಾಪ ಪೋಪುದು' ಎಂದಿರುವು ದರಲ್ಲಿ 'ನಾರಾಯಣ ಎಂದೊಡೆ ಪಾಪ' ಎಂದಷ್ಟಕ್ಕೇ ನಿಲ್ಲಿಸಿದರೆ, ನಾರಾಯಣ ಎನ್ನುವುದರಿಂದ ಕೆಟ್ಟದ್ದು, ದೋಷ ಎಂದು ಅರ್ಥವಾಗುತ್ತದಲ್ಲವೆ?.....

Sri L. SIDDAPPA.—Sir, that is not a correct statement. After a request from the Hon'ble Minister, I have read it.....

Sri K. CHENGALARAYA REDDY (Leader of the House).—I rise to a point of order, Sir. When one Hon'ble Member is speaking, unless he yields and sits down, no other Hon'ble Member can interrupt him.

Mr. SPEAKER.—Yes, it is so.

ಶ್ರೀ ಎಚ್. ಸಿದ್ದಯ್ಯನವರು.—ಈ ರೀತಿ ಒಂದರ ಮೇಲೊಂದು ಎಮರ್ಜೆನ್ಸಿ ಕಾನೂನುಗಳನ್ನು ಜಾರಿಗೆ ತರುವುದು ಸರಿಯಲ್ಲ; ಮಾರ್ಚ್ ತಿಂಗಳಲ್ಲಿ ಅಧಿವೇಶನ ವಿತ್ತು; ಅದರ ಮುಂದಿಟ್ಟು ಪೂರ್ವಭಾವಿಯಾಗಿ ಅನು ಮತಿ ಪಡೆಯಬೇಕಾಗಿತ್ತೆಂದು ಶ್ರೀಮಾನ್ ಸಿದ್ದಪ್ಪನ ವರು ಹೇಳಿದರು. ಇದಕ್ಕೆ ಉತ್ತರವನ್ನು ನಾನು ನನ್ನ ಮೊದಲ ಭಾಷಣದಲ್ಲೇ ಹೇಳಿದ್ದೇನೆ. ಈ ಸಂದರ್ಭದಲ್ಲಿ ನಾನೊಂದು ಮಾತು ಹೇಳಿದರೆ ಅಪ್ರಕೃತವಾಗಲಾ ರದು. 1945ನೆಯ ಇಸವಿಯಿಂದ 1947 ರವರೆಗೆ ಅವರು ಸರ್ಕಾರದಲ್ಲಿದ್ದಾಗ ಎಷ್ಟು ಎಮರ್ಜೆನ್ಸಿ ಕಾನೂ ನುಗಳನ್ನು ಹೊರಡಿಸಿದರೆಂಬುದನ್ನು ಸ್ವಲ್ಪ ಅವರು ಜ್ಞಾಪಿಸಿಕೊಳ್ಳಲಿ. 1945ನೆಯ ಇಸವಿಯಲ್ಲಿ 8, 1946 ರಲ್ಲಿ 19 ಮತ್ತು 1947ರಲ್ಲಿ 16 ಹೀಗೆ ಅವರ ಮಂತ್ರಿ ಮಂಡಲದಲ್ಲಿದ್ದ ಕಾಲದಲ್ಲಿ ಎಮರ್ಜೆನ್ಸಿ ಕಾನೂನುಗ ಳನ್ನು ಹೊರಡಿಸಿದ್ದಾರೆಂದು ಹೇಳಿದರೆ ಸಾಕು.

ಶ್ರೀ ಎಲ್. ಸಿದ್ದಪ್ಪನವರು.—ಆ ಮಂತ್ರಿಮಂಡಲ ದವರು ತಪ್ಪು ಮಾಡಿದರೆ ನೀವೂ ಮಾಡಬೇಕೆ?

ಶ್ರೀ ಎಚ್. ಸಿದ್ದಯ್ಯನವರು.—ತಪ್ಪಲ್ಲ, ವಿಶೇಷ ಸಂದರ್ಭಗಳಲ್ಲಿ ಹಾಗೆ ಮಾಡಬೇಕಾಗುತ್ತದೆಂದು ನಾನು ಹೇಳಬೇಕಾಗಿದೆ.

ಈ ಮಸೂದೆಯ ಪರವಾಗಿ ಮಾತನಾಡಿದ ಮಹನೀ ಯರು ಇದರ ವಿಚಾರವನ್ನು ಬಹಳ ಸ್ಪಷ್ಟವಾಗಿಯೂ ವಿವರವಾಗಿಯೂ ತಿಳಿಸಿದ್ದಾರಾದುದರಿಂದ ನಾನು ಹೆಚ್ಚು ಹೇಳಬೇಕಾಗಿಲ್ಲ. ಒಟ್ಟಿನಲ್ಲಿ ಒಂದೇ ವಾಕ್ಯ ದಲ್ಲಿ ಹೇಳುವುದಾದರೆ, ಇದರಿಂದ ಇನಾಂದಾರರ

ಮತ್ತು ಸೇರ್ವೆಗಾರರ ಹಿತಸಾಧನೆಯಾಗುತ್ತದೆಯೇ ಹೊರತು ತೊಂದರೆಯೇನೂ ಇಲ್ಲ. ಇದರಲ್ಲಿ ನ್ಯೂನತೆ ಯಾವುದೂ ಕಂಡುಬರುವುದಿಲ್ಲ. ಇದನ್ನು ರೈತರು ಮತ್ತು ಇನಾಂದಾರರು—ಇವರ್ಇರ್ವರ ಹಿತದೃಷ್ಟಿ ಯಿಂದ ತಂದಿರುವ ಕಾರಣ ನಭೆ ಇದನ್ನು ಅಂಗೀಕಾರ ಮಾಡಬಹುದೆಂದು ನಾನು ಸೂಚಿಸುತ್ತೇನೆ.

ಶ್ರೀ ಬಿ. ಚನ್ನಬೈರೇಗೌಡರು.—ರೈತರಿಗೆ ಏನು ತೊಂದರೆ ಇದೆ ಎಂಬುದನ್ನು ಹೇಳೋಣವಾಗಲಿ.

ಅಧ್ಯಕ್ಷರು.—ನೀವು ಆಗಲೇ ಹೇಳಿದ್ದೀರಲ್ಲ !

Mr. SPEAKER.—The question is :

"That the Mysore Alienated Villages (Protection of Tenants and Miscellaneous Provisions) Bill, 1950, be taken into consideration."

The motion was adopted.

Mr. SPEAKER.—The Clauses of the Bill will now be submitted to the House. Clause 2.

The question is :

"That Clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 3. I think there is an amendment by Sri H. C. Linga Reddy.

Sri H. C. LINGA REDDY (Kolar District—General).—Sir, I am not moving the amendments.

Mr. SPEAKER.—Then, I will put the clauses 3 to 7, both inclusive. The question is :

"That Clauses 3 to 7, both inclusive, stand part of the Bill."

The motion was adopted.

Clauses 3 to 7, both inclusive, were added to the Bill.

Mr. SPEAKER.—Clause 8. There is an amendment by Sri S. R. Guru.

Sri S. R. GURU (Bangalore District—General).—Sir, I am not moving my amendment.

Mr. SPEAKER.—I will put Clauses 8 to 13, both inclusive. The question is :

"That Clauses 8 to 13, both inclusive, stand part of the Bill."

The motion was adopted.

Clauses 8 to 13, both inclusive, were added to the Bill.

Mr. SPEAKER.—New Clause 13 A. Sri H. C. Linga Reddy.

Sri H. C. LINGA REDDY.—Sir, I do not propose to move the amendment.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

Sri H. SIDDAIYA.—Sir, I beg to move :

"That the Mysore Alienated Villages (Protection of Tenants and Miscellaneous Provisions) Bill, 1950, be passed."

Mr. SPEAKER.—The question is :

"That the Mysore Alienated Villages Protection of Tenants and Miscellaneous Provisions) Bill, 1950, be passed."

The motion was adopted.

The Code of Civil Procedure (Amendment) Bill.

Motion to consider.

Sri K. T. BHASHYAM (Minister for Law and Labour).—Sir, I beg to move :

"That the Code of Civil Procedure (Amendment) Bill 1950, be taken into consideration."

ಈ ಮಸೂದೆಯಲ್ಲಿ ಮೂರು ಅಂಶಗಳಿವೆ. ಮೊದಲನೆಯದಾಗಿ, ನಮ್ಮ ಸಂಸ್ಥಾನದ ಸಿವಿಲ್ ಕೋರ್ಟುಗಳ ಜಡ್ಜ್‌ಮೆಂಟ್ ಡಿಕ್ರಿಗಳನ್ನು ಇತರ ಪ್ರಾಂತಗಳಲ್ಲಿ ಜಾರಿಗೆ ಕೊಡುವುದಕ್ಕೆ ಅವಕಾಶ ಮಾಡಿ ಭಾರತ ಸರ್ಕಾರದವರು ಕಾನೂನಿನಲ್ಲಿ ತಕ್ಕ ತಿದ್ದುಪಡಿ ಮಾಡಿದ್ದಾರೆ. ಇತ್ತೀಚೆಗೆ ನಮ್ಮ ಸಂಸ್ಥಾನಕ್ಕೂ ಇತರ ಪ್ರಾಂತಗಳಿಗೂ ವ್ಯಾಪಾರ ವಿಶೇಷವಾಗಿ ಹೆಚ್ಚುತ್ತಿದೆ. ಆದಕಾರಣ ಪರಸ್ಪರ ಇಂತಹ ಸೌಲಭ್ಯಗಳನ್ನು ಏರ್ಪಡಿಸುವುದು ಅವಶ್ಯಕ ಮತ್ತು ಯುಕ್ತ. ನಮ್ಮ ಕೋರ್ಟುಗಳ ಡಿಕ್ರಿಗಳನ್ನು ಅವರು ಹೇಗೆ ಜಾರಿಗೆ ಕೊಡುತ್ತಾರೋ ಹಾಗೆಯೇ ಇತರ ಸಂಸ್ಥಾನಗಳ ಕೋರ್ಟುಗಳ ಡಿಕ್ರಿಗಳನ್ನು ನಾವು ಜಾರಿಗೆ ಕೊಡಬೇಕು. Reciprocity in the matter of execution of decree ಇರಬೇಕೆಂಬ ಉದ್ದೇಶದಿಂದ ನಮ್ಮ ಸಿವಿಲ್ ಪ್ರೊಸೀಜರ್ ಕೋಡನ್ನು ನೂಕ್ತ ತಿದ್ದುಪಡಿ ಮಾಡುವುದೊಂದು.

ಎರಡನೆಯದಾಗಿ, ಸಿವಿಲ್ ಮೊಬದ್ದಮೆಗಳ ವಿಚಾರದಲ್ಲಿ ಇಂಡಿಯಾ ದೇಶದ ಎಲ್ಲ ಹೈಕೋರ್ಟುಗಳ ತೀರ್ಮಾನದ ಮೇಲೆ ಸುಪ್ರೀಂ ಕೋರ್ಟಿಗೆ ಅಪೀಲು ಮಾಡಲು ಅವಕಾಶಮಾಡಿದ್ದಾರೆ, ರಾಜ್ಯಾಂಗದಲ್ಲಿ. ಅದಕ್ಕನುಸಾರವಾಗಿ ನಮ್ಮ ಹೈಕೋರ್ಟಿನ ತೀರ್ಮಾನಗಳ ಮೇಲೂ ಸುಪ್ರೀಂ ಕೋರ್ಟಿಗೆ ಅಪೀಲು ಮಾಡಲು ಈ ತಿದ್ದುಪಡಿಯಿಂದ ಅವಕಾಶ ಕಲ್ಪಸಿದ್ದೇವೆ.